# ಜನತಾವಾಣಿ


ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಜುಲೈ 18, 2022

ಸಂಪುಟ : 49 ಸಂಚಿಕೆ : 65 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

ಚಿತ್ರ ಸಂಗ್ರಹ : ಜಿಗಳಿ ಪ್ರಕಾಶ್

**ಜೋಗ...** ಸತತ ಮಳೆಯಿಂದಾಗಿ ವಿಶ್ವ ವಿಖ್ಯಾತ ಜೋಗ ಜಲಪಾತದ ನಯನ ಮನೋಹರ ದೃಶ್ಯ ಪ್ರವಾಸಿಗರ ಕಣ್ಮನ ಸೆಳೆಯುತ್ತಿದೆ.

# ಧರ್ಮ ಮತ್ತು ರಾಜಕಾರಣದ ಅಪವಿತ್ರ ಮೈತ್ರಿಯ ಫಲವಾಗಿ ಚರಿತ್ರೆ ಅಪವ್ಯಾಖ್ಯಾನಕ್ಕೆ ಗುರಿಯಾಗಿದೆ




**ಕುರುಬರ ಸಂಸ್ಕೃತಿ ದರ್ಶನ ಮಾಲಿಕೆಯ 13 ಗ್ರಂಥಗಳ ಅನಾವರಣ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ**

ದಾವಣಗೆರೆ, ಜು. 17- ಕುರುಬರ ಇತಿಹಾಸ, ಸಂಸ್ಕೃತಿ, ಪರಂಪರೆ ಕುರಿತು ಸ್ಥೂಲವಾಗಿ ಅಧ್ಯಯನ ಮಾಡಿ ಹೊರತಂದಿರುವ ಕುರುಬರ ಸಂಸ್ಕೃತಿ ದರ್ಶನ ಮಾಲಿಕೆಯ ಹದಿಮೂರು ಗ್ರಂಥಗಳ ಪೈಕಿ 10 ಗ್ರಂಥಗಳು ಮುಂದಿನ ಪೀಳಿಗೆಗೆ ದಾರಿದೀಪವಾಗಲಿ ಎಂದು ಹರಿಹರದ ಶಾಸಕ ಎಸ್. ರಾಮಪ್ಪ ಆಶಯ ವ್ಯಕ್ತಪಡಿಸಿದರು.

ಕುರುಬರ ಸಾಂಸ್ಕೃತಿಕ ಪರಿಷತ್ತು (ಬೆಂಗಳೂರು) ಹಾಗೂ ದಾವಣಗೆರೆ ಜಿಲ್ಲಾ ಕುರುಬ ಸಮಾಜದ ಎಲ್ಲಾ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಕುರುಬರ ಸಂಸ್ಕೃತಿ ದರ್ಶನ ಮಾಲಿಕೆಯ 13 ಗ್ರಂಥಗಳನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ಸಮಾಜದ ಜಾಗೃತಿಗೆ ಈ ಗ್ರಂಥಗಳು ಹೆಚ್ಚು ಉಪಯುಕ್ತವಾಗಲಿದ್ದು, ಯುವ ಪೀಳಿಗೆ ಗ್ರಂಥಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಕನಕದಾಸರು, ಕಾಳಿದಾಸರು, ಸಂಗೊಳ್ಳಿರಾಯಣ್ಣ ಮುಂತಾದ ಮಹನೀಯರ ಮಾರ್ಗದರ್ಶನದಿಂದ ಸಮಾಜ ಸಾಕಷ್ಟು ಜಾಗೃತಗೊಂಡಿದೆ ಎಂದರು.

ಕುರುಬರ ಸಂಸ್ಕೃತಿ ದರ್ಶನ ಮಾಲಿಕೆಯ ಎಲ್ಲಾ ಗ್ರಂಥಗಳನ್ನು ಶ್ರಮವಹಿಸಿ ಅಧ್ಯಯನ ಮಾಡಿ ಹೊರತರಲಾಗಿದೆ. ಸಮಾಜ ಬಾಂಧವರು ಗ್ರಂಥಗಳನ್ನು ಕೊಂಡು ಓದಿ ಸಮಾಜದ ಹಿನ್ನೆಲೆ, ಮುನ್ನೆಲೆಗಳನ್ನು ತಿಳಿದುಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ಆಗಸ್ಟ್ 3 ರಂದು ದಾವಣಗೆರೆಯಲ್ಲಿ ನಡೆಯುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಮೃತ ಮಹೋತ್ಸವ ಸಮಾರಂಭವನ್ನು ಯಶಸ್ವಿಯಾಗಿ ಆಚರಿಸಲು ಸಮಾಜ ಬಾಂಧವರು ಸಹಕರಿಸುವಂತೆ ಮನವಿ ಮಾಡಿದರು.

ನಿವೃತ್ತ ಪ್ರಾಚಾರ್ಯರೂ ಆದ ಜಾನಪದ ತಜ್ಞ ಡಾ. ಮಲ್ಲಿಕಾರ್ಜುನ (2ನೇ ಪುಟಕ್ಕೆ)

> “ಕುರುಬ ಸಮುದಾಯ ಬಹುಮುಖಿ ಸಂಸ್ಕೃತಿ, ಸಾಂಪ್ರದಾಯದ ನೆಲೆಗಟ್ಟನ್ನು ಹೊಂದಿದ. ಬೆವರಿನ ಸಮಾಜವಾಗಿದೆ.
> - ಡಾ.ಎ.ಬಿ. ರಾಮಚಂದ್ರಪ್ಪ, ನಿವೃತ್ತ ಪ್ರಾಧ್ಯಾಪಕರು

# ಹರಿಹರ: ಗಂಗಾನಗರ, ಬೆಂಕಿನಗರ ನಿವಾಸಿಗಳಿಗೆ ಶಾಶ್ವತ ವ್ಯವಸ್ಥೆ



**ಜಿಲ್ಲಾಧಿಕಾರಿ ಶಿವಾನಂದ ಕಪಾಸಿ**

ಹರಿಹರ, ಜು. 17- ತುಂಗಭದ್ರಾ ನದಿಯ ನೀರಿನ ಹರಿವು ಹೆಚ್ಚಾದ ತಕ್ಷಣವೇ ಗಂಗಾನಗರದ ಸುಮಾರು 20 ಮನೆಗಳಿಗೆ ನೀರು ನುಗ್ಗುವುದರಿಂದ ಅಲ್ಲಿನ ಹಾಗೂ ಬೆಂಕಿನಗರ ಬಡಾವಣೆಯ ನಿವಾಸಿಗಳಿಗೆ ಶಾಶ್ವತ ವ್ಯವಸ್ಥೆಗೆ ಶೀಘ್ರವೇ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಹೇಳಿದರು.

ಎಪಿಎಂಸಿ ಆವರಣದ ಕಾಳಜಿ ಕೇಂದ್ರ, ಗಂಗಾನಗರ ಹಾಗೂ ಬೆಂಕಿನಗರದ ಚಾನಲ್ ವೀಕ್ಷಣೆ ಮಾಡಿದ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಗಂಗಾನಗರ ನಿವಾಸಿಗಳು ವಾಸಿಸುತ್ತಿರುವ ಸ್ಥಳ ಪಿಡಬ್ಲ್ಯೂಡಿ ಇಲಾಖೆಯ ರಸ್ತೆಗೆ ನಿಗದಿಪಡಿಸಿರುವ ಸ್ಥಳ ಎನ್ನಲಾಗಿದೆ. ಅಲ್ಲಿನ 15 ರಿಂದ 20 ಮನೆಗಳಿಗೆ ಮಾತ್ರ ತೊಂದರೆ ಆಗುತ್ತಿದೆ. ಅಲ್ಲಿನವರಿಗೆ ಸ್ಲಂ ಬೋರ್ಡ್ ವತಿಯಿಂದ ವಸತಿಗೆ ವ್ಯವಸ್ಥೆ ಮಾಡಲಾಗುವುದು. ನಂತರದಲ್ಲಿ ಪ್ರವಾಹ ಪೀಡಿತ ಪ್ರದೇಶದಲ್ಲಿ ಯಾರೂ ಮನೆ ಕಟ್ಟಿಕೊಳ್ಳದಂತೆ ಆ ಸ್ಥಳವನ್ನು ನಗರಸಭೆಯ ವ್ಯಾಪ್ತಿಗೆ ತರಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಬೆಂಕಿನಗರ ಬಡಾವಣೆಯ ನಿವಾಸಿಗಳ ಸಮಸ್ಯೆ ತಕ್ಷಣವೇ ಆಗುವಂತಹ ಕಾರ್ಯವಲ್ಲ. ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಲು ವಿವಿಧ ಇಲಾಖೆಯ ಅಧಿಕಾರಿಗಳ ಬಳಿ ಸಮಗ್ರವಾಗಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದರು.

ಮುಂದಿನ ದಿನಗಳಲ್ಲಿ ನಗರದಲ್ಲಿನ ಜ್ವಲಂತ ಸಮಸ್ಯೆಗಳಾದ ಯುಜಿಡಿ, ಜಲಸಿರಿ ಯೋಜನೆ, ರಸ್ತೆಗಳ ದುರಸ್ತಿ, ಸ್ವಚ್ಛತೆ, ಆರೋಗ್ಯ, ಟ್ರಾಫಿಕ್, ವಿದ್ಯುತ್ ಸೇರಿದಂತೆ, ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುವುದು. ತಾಲ್ಲೂಕಿನ ಸಾರಥಿ ಮತ್ತು ಚಿಕ್ಕಬಿದರಿ ಮತ್ತು ಕಡರನಾಯಕನ (3ನೇ ಪುಟಕ್ಕೆ)



ವೈದ್ಯಕೀಯ ಪದವಿಗೆ ಪ್ರವೇಶ ಪಡೆಯಲು ಕಡ್ಡಾಯವಾಗಿರುವ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ಭಾನುವಾರ ದಾವಣಗೆರೆಯಲ್ಲಿ ನಡೆಯಿತು. ತಮ್ಮ ನೋಂದಣಿ ಸಂಖ್ಯೆ ಪರೀಕ್ಷಿಸುತ್ತಿರುವ ಅಭ್ಯರ್ಥಿಗಳು

# ಬಾಂಗ್ಲಾ ಹಿಂಸಾಚಾರ: ದೇವಾಲಯ, ಹಿಂದೂಗಳ ಮನೆಗಳ ಮೇಲೆ ದಾಳಿ

ಢಾಕಾ, ಜು. 17- ಬಾಂಗ್ಲಾದೇಶದ ವಾಯುವ್ಯ ಭಾಗದಲ್ಲಿ ಹಿಂಸಾಚಾರ ಭುಗಿಲೆದ್ದಿದ್ದು, ದೇವಾಲಯ, ಹಿಂದೂ ಸಮುದಾಯಕ್ಕೆ ಸೇರಿದ ಅಂಗಡಿಗಳು ಹಾಗೂ ಮನೆಗಳನ್ನು ಧ್ವಂಸಗೊಳಿಸಲಾಗಿದೆ.

ಅಲ್ಪಸಂಖ್ಯಾತ ಹಿಂದೂ ಸಮುದಾಯವನ್ನು ಗುರಿಯಾಗಿಟ್ಟುಕೊಂಡು ದೇಶದಲ್ಲಿ ಹಿಂಸೆ ನಡೆಸುವ ಘಟನೆಗಳು ಬಾಂಗ್ಲಾದೇಶದಲ್ಲಿ ನಿರಂತರವಾಗಿ ಕಂಡು ಬರುತ್ತಿವೆ. ಈ ಬಾರಿ ಫೇಸ್‌ಬುಕ್‌ನಲ್ಲಿ ನೀಡಲಾದ ಹೇಳಿಕೆ ಯೊಂದನ್ನು ನೆಪವಾಗಿಟ್ಟುಕೊಂಡು ದಾಳಿ ನಡೆಸಲಾಗಿದೆ. ನರೈಲ್ ಜಿಲ್ಲೆಯ ಸಹಪರ ಹಳ್ಳಿಯಲ್ಲಿ ಹಲವು ಮನೆಗಳಿಗೆ ಬೆಂಕಿ ಹಚ್ಚಲಾಗಿದೆ. ಜನರನ್ನು ಚೆದುರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಫೇಸ್‌ಬುಕ್‌ನಲ್ಲಿ ವ್ಯಕ್ತಿಯೋರ್ವ ನೀಡಿದ ಹೇಳಿಕೆ ವಿರುದ್ಧ ಶುಕ್ರವಾರದ ಪ್ರಾರ್ಥನೆಯ ನಂತರ ಪ್ರತಿಭಟನೆ ನಡೆಸಲಾಗಿತ್ತು. ನಂತರ ಪರಿಸ್ಥಿತಿ ಸಾಮಾನ್ಯವಾಗಿತ್ತು.

ಆದರೆ, ನಂತರದಲ್ಲಿ ಮತ್ತೆ ಹಿಂಸಾಚಾರ ನಡೆಸಲಾಗಿದೆ. ಕೆಲವರು ಬಂದು (4ನೇ ಪುಟಕ್ಕೆ)

# ದಿನಬಳಕೆ ವಸ್ತುಗಳಿಗೆ ಇಂದಿನಿಂದ ಶೇ.5ರಷ್ಟು ಜಿಎಸ್‌ಟಿ

ನವದೆಹಲಿ, ಜು. 17- ಹಾಲು, ಮೊಸರು ಸೇರಿದಂತೆ ಹಲವಾರು ದಿನ ಬಳಕೆ ವಸ್ತುಗಳಿಗೆ ಇಂದಿನಿಂದ ಜನರು ಶೇ.5ರ ಜಿ.ಎಸ್.ಟಿ. ಪಾವತಿಸಬೇಕಿದೆ.

5 ಸಾವಿರ ರೂ.ಗಳಿಗೂ ಹೆಚ್ಚಿನ ದಿನ ಬಾಡಿಗೆಯ ಆಸ್ಪತ್ರೆ ಕೋಣೆಗಳು ಹಾಗೂ ಸಾವಿರ ರೂ.ಗಳ ಒಳಗಿನ ಹೋಟೆಲ್ ಕೋಣೆಗಳಿಗೂ ಜಿಎಸ್‌ಟಿ ವಿಧಿಸಲಾಗುವುದು. ಚೆಕ್ ಬುಕ್‌ಗಳಿಗೂ ಸಹ ಶೇ.18ರ ಜಿ.ಎಸ್.ಟಿ. ಜಾರಿಗೆ ಬಂದಿದೆ. ಸಚಿವರ ಸಮಿತಿ ತೆರಿಗೆ ಪರಿಷ್ಕರಣೆಗೆ ಸಂಬಂಧಿಸಿದಂತೆ ನೀಡಿದ ಶಿಫಾರಸ್ಸುಗಳಿಗೆ ಕೇಂದ್ರ ಹಾಗೂ ರಾಜ್ಯ ಹಣಕಾಸು ಸಚಿವರನ್ನು ಒಳಗೊಂಡ ಸಮಿತಿ ಇತ್ತೀಚೆಗೆ ಒಪ್ಪಿಗೆ ನೀಡಿತ್ತು.

ಎಲ್.ಇ.ಡಿ. ದೀಪ ಹಾಗೂ ಸೋಲಾರ್ ವಾಟರ್ ಹೀಟರ್ ಸೇರಿದಂತೆ ಹಲವು ವಸ್ತುಗಳ ಜಿಎಸ್‌ಟಿ ಹೆಚ್ಚಿಸಲಾಗಿದ್ದು, ಅದೂ ಸಹ (3ನೇ ಪುಟಕ್ಕೆ)

# ಉಪರಾಷ್ಟ್ರಪತಿ ಚುನಾವಣೆ : ಪ್ರತಿಪಕ್ಷಗಳ ಜಂಟಿ ಅಭ್ಯರ್ಥಿಯಾಗಿ ಮಾರ್ಗರೇಟ್ ಆಳ್ವ



ನವದೆಹಲಿ, ಜು. 17 – ರಾಜಸ್ಥಾನದ ಮಾಜಿ ರಾಜ್ಯಪಾಲೆ ಮಾರ್ಗರೇಟ್ ಆಳ್ವ ಅವರನ್ನು ಉಪರಾಷ್ಟ್ರಪತಿ ಚುನಾವಣೆಗೆ ಜಂಟಿ ಅಭ್ಯರ್ಥಿಯಾಗಿ ಕಣಕ್ಕಿಳಿಸಲು ಪ್ರತಿಪಕ್ಷಗಳು ತೀರ್ಮಾನಿಸಿವೆ. ಆಳ್ವ ಅವರು ಮಂಗಳವಾರ ನಾಮಪತ್ರ ಸಲ್ಲಿಸಲಿದ್ದಾರೆ. ಆಗಸ್ಟ್ 6ರಂದು ಚುನಾವಣೆ ನಡೆಯಲಿದೆ.

ಪಶ್ಚಿಮ ಬಂಗಾಳದ ರಾಜ್ಯಪಾಲ ಜಗದೀಪ್ ಧಂಖರ್ ಅವರನ್ನು ಎನ್.ಡಿ.ಎ. ಕಣಕ್ಕಿಳಿಸಿದೆ. ಅವರು ಗೆಲ್ಲುವುದು ನಿಶ್ಚಿತವಾಗಿದೆ. ಎನ್.ಸಿ.ಪಿ. ಅಧ್ಯಕ್ಷ ಶರದ್ ಪವಾರ್ ಅವರ ಮನೆಯಲ್ಲಿ ನಡೆದ 17 ಪಕ್ಷಗಳ ಸಭೆಯಲ್ಲಿ ಆಳ್ವ ಅವರನ್ನು ಅಭ್ಯರ್ಥಿಯಾಗಿ (3ನೇ ಪುಟಕ್ಕೆ)


WANTED IMMEDIATELY

India's No.1 Institution MIFSE, presently operating in 11 cities acros the country, affiliated to Mangalore University, Bangalore City University, & University of Mysore. Invites applications from very talented & eligible candidates for following positions.

DAVANAGERE BRANCH

1. BRANCH MANAGER (F) } Salary: 15-30K
2. FRONT OFFICE ADMIN (F)
3. COURSE COUNSELLORS (F) } Salary: 12-20K

Attractive pay Packages +incentives will be provided (Age limite below 36yrs)

Mifse
AN ISO 9001:2015 CERTIFIED INSTITUTION
EMPLOYABILITY ASSURED
Recognised by NSDC, Govt. of India
Affiliated to Mangalore University, Bangalore City University, University of Mysore

DAVANGERE
2ND Floor, BSC Avenue Above SBI,
AVK College Road, Davanagere-577002
70222 89933

Interested Candidates can send cv to: info@mifse.com


# ದೂಳಿನಿಂದ ಮಸುಕಾದ ಗಾಜಿನ ಮನೆ





ದಾವಣಗೆರೆ, ಜು. 17 – ನಗರದ ಏಕೈಕ ಪ್ರವಾಸಿ ಕೇಂದ್ರವಾದ ಗಾಜಿನ ಮನೆ ಈಗ 'ಮಸುಕಾಗಿದೆ'. ಗಾಜಿನ ಮನೆಯ ಒಳ ಭಾಗದಲ್ಲಿ ಅಂಟಿಕೊಂಡಿರುವ ದೂಳು ಹಾಗೂ ತುಕ್ಕಿನಿಂದ ಅಂದಗೆಡಿಸಿಕೊಂಡಿರುವ ಕಂಬಿಗಳು ಇದಕ್ಕೆ ಕಾರಣ. ಬೇಸಿಗೆಯ ಕಾಲದಲ್ಲಿ ದೂಳುಮಯವಾಗಿದ್ದರೂ ಬೆಳಕು ಹೆಚ್ಚಾಗಿದ್ದ ಕಾರಣ ಗಾಜಿನ ಮನೆ ಅಂದಗೆಟ್ಟ ಛಾಯೆ ಇರಲಿಲ್ಲ. ಆದರೆ, ಈಗ ಮೋಡ ಮುಸುಕಿದ ವಾತಾವರಣದಲ್ಲಿ ಗಾಜುಗಳು ಅಂದಗೆಟ್ಟಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

ಇದರ ಜೊತೆಗೆ ಆವರಣದಲ್ಲಿರುವ ಎರಡು ಕುಡಿಯುವ ನೀರಿನ ಘಟಕಗಳು ತುಕ್ಕು ಹಿಡಿದು ಕೆಲಸಕ್ಕೆ ಬಾರದಂತಾಗಿವೆ. ಇವುಗಳನ್ನು ಅಳವಡಿಸಿದ ಕಾಲದಿಂದಲೂ ಸಮಸ್ಯೆ ಇದ್ದೇ ಇದೆ. ಎರಡು ಬಾರಿ ರಿಪೇರಿಯಾದ ನಂತರ ಮತ್ತೆ ಕೆಟ್ಟಿವೆ. ನಿರ್ಮಿತಿ ಕೇಂದ್ರದಿಂದ ಸ್ಥಾಪಿಸಲಾದ ಈ ಕುಡಿಯುವ ನೀರಿನ ಘಟಕಗಳು ಕೆಲಸ ಮಾಡುವುದನ್ನೇ ನಿಲ್ಲಿಸಿವೆ.

> **ಅಲ್ಲದೇ, ಗಾಜಿನ ಮನೆಯ ಒಳಭಾಗದಲ್ಲಿ ಎಷ್ಟರ ಮಟ್ಟಿಗೆ ದೂಳು ಕವಿದಿದೆ ಎಂದರೆ, ಯುವ ಪ್ರೇಮಿಗಳು ತಮ್ಮ ಹೆಸರುಗಳನ್ನು ದೂಳಿನ ಮೇಲೆ ಬರೆದಿದ್ದಾರೆ. ಗಾಜಿನ ಮನೆ ನೋಡಲು ಬಂದವರಿಗೆ ದೂಳಿನ ಪ್ರೇಮ ಪ್ರಲಾಪಗಳನ್ನು ನೋಡುವ ಅವಕಾಶ ಉಚಿತವಾಗಿ ಲಭ್ಯವಾಗುತ್ತಿದೆ.**

ಗಾಜಿನ ಮನೆಯ ಆವರಣ, ಹುಲ್ಲು ಹಾಸು, ಲ್ಯಾಂಡ್‌ಸ್ಕೇಪಿಂಗ್ ಮನ ಸೆಳೆಯುವಂತಿದೆ. ಆದರೆ, ಇಲ್ಲೆಲ್ಲೂ ಕುಳಿತುಕೊಳ್ಳಲು ಜಾಗವಿಲ್ಲ ಎಂಬುದು ಇನ್ನೊಂದು ಕೊರತೆ.

ಗಾಜಿನ ಮನೆ ನಿರ್ಮಾಣವಾದ ಕಾಲದಿಂದಲೂ ನೆಟ್ಟಗಿನ ಒಂದು ರಸ್ತೆ ಇರಲಿಲ್ಲ. ಈಗ ರಸ್ತೆ ನಿರ್ಮಾಣ ಕಾರ್ಯ ಆರಂಭವಾಗಿದ್ದು, ಇನ್ನೊಂದು ವಾರದಲ್ಲಿ ಸುಗಮವಾಗಿ ಗಾಜಿನ ಮನೆ ತಲುಪಬಹುದು ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ವಾರಾಂತ್ಯದ ದಿನಗಳಲ್ಲಿ ಸಂಜೆಯ ವೇಳೆ ಬೆಳಕು - ಲೇಸರ್ ಶೋಗಳ ಕಾರಂಜಿ ಜನರನ್ನು ಇನ್ನಷ್ಟು ಸೆಳೆಯಲು ಅನುಕೂಲವಾಗಲಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಆದರೆ, ಇಷ್ಟೆಲ್ಲದರ ನಡುವೆ ಆಕರ್ಷಣೆಯ ಕೇಂದ್ರವಾದ ಗಾಜಿನ ಮನೆಗೆ ಮಸುಕು ಹಿಡಿದಿರುವುದು ಕಪ್ಪು ಚುಕ್ಕೆಯಂತಾಗಿದೆ. ಈ ಬಗ್ಗೆ ಸಂಬಂಧಪಟ್ಟವರು ಕಾಳಜಿ ತೋರಬೇಕಿದೆ.


ಹೃದಯಪೂರ್ವಕ ಅಭಿನಂದನೆಗಳು



ದಿ. ಟಿ. ಲೋಕೇಶ್ ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ದಿ. ಶ್ರೀಮತಿ ದೇವಮ್ಮ ಲೋಕೇಶ್ ಇವರ ಅಳಿಯಂದಿರಾದ

ಡಾ. ಆರ್.ಸಿ. ಜಗದೀಶ್

ಇವರು ಶಿವಮೊಗ್ಗ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ನೂತನ ಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿದ ಈ ಸಂದರ್ಭದಲ್ಲಿ

ಶುಭ ಕೋರುವವರು

ಶ್ರೀ ಆರ್.ಬಿ ಬಣಕಾರ ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್.
ಶ್ರೀಮತಿ ಗೀತಾ ಬಣಕಾರ ಮತ್ತು ಮಕ್ಕಳು, ದಾವಣಗೆರೆ.
ಶ್ರೀಮತಿ ಉಷಾ ಜಗದೀಶ ಮತ್ತು ಮಕ್ಕಳು ಶಿವಮೊಗ್ಗ.
ಶ್ರೀ ಪಿ.ಬಿ ಶಶಿಧರ ಕಾರ್ಯಪಾಲಕ ಇಂಜಿನಿಯರ್ KRDCL PWD.
ಶ್ರೀಮತಿ ಆಶಾ ಶಶಿಧರ ಮತ್ತು ಮಕ್ಕಳು, ದಾವಣಗೆರೆ.



ಜನ್ಮದಿನದ ಶುಭಾಶಯಗಳು



ದಿನಾಂಕ : 19.07.2022 ರ ಮಂಗಳವಾರ ತಮ್ಮ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ

ಶ್ರೀ ಲೋಕೇಶ್

ಅವರಿಗೆ ಜನ್ಮದಿನದ ಶುಭಾಶಯಗಳು. ಶ್ರೀಯುತರಿಗೆ ಭಗವಂತನು ಆಯುರಾರೋಗ್ಯ, ಐಶ್ವರ್ಯ ನೀಡಲೆಂದು ಶುಭ ಕೋರುತ್ತೇವೆ.

ಶುಭ ಕೋರುವವರು



ಎಂ. ವೆಂಕಟೇಶ್ ಮಂಜು ಯಲ್ಲಪ್ಪ ಎಂ.ಎನ್

# ಜಂಗಮರಿಗೆ ಎಸ್ಸಿ ಜಾತಿ ಪ್ರಮಾಣ ಪತ್ರಕ್ಕೆ ವಿರೋಧ



**ಹರಿಹರ**

ಹರಿಹರ, ಜು. 17 - ವೀರಶೈವ ಜಂಗಮರಿಗೆ ಎಸ್ಸಿ ಜಾತಿ ಪ್ರಮಾಣ ಪತ್ರ ನೀಡುವುದನ್ನು ಖಂಡಿಸಿ, ತಾಲ್ಲೂಕಿನಲ್ಲಿ ಬೃಹತ್ ಹೋರಾಟ ರೂಪಿಸಲು ನಗರದ ಪಿಡಬ್ಲ್ಯುಡಿ ಪ್ರವಾಸಿಮಂದಿರದಲ್ಲಿ ನಡೆದ ಎಸ್ಸಿ, ಎಸ್ಟಿ ಸಂರಕ್ಷಣಾ ಹೋರಾಟ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಮಾತನಾಡಿ, ನೈಜ ಬೇಡ ಜಂಗಮರು ಸಾಮಾನ್ಯವಾಗಿ ಆಂಧ್ರಪ್ರದೇಶಕ್ಕೆ ಹೊಂದಿಕೊಂಡವರು. ರಾಜ್ಯದ ಬೀದರ್, ಕಲಬುರಗಿ, ರಾಯಚೂರು ಮತ್ತು ಬಳ್ಳಾರಿ ಜಿಲೆಗಳಲ್ಲಿ ಕಂಡು ಬರುತ್ತಾರೆ ಎಂದರು.

ಬೇಡ ಜಂಗಮರು ಹಾಗೂ ವೀರಶೈವ ಲಿಂಗಾಯತ ಜಂಗಮರ ನಡುವೆ ಪರಂಪರೆ, ಸಂಸ್ಕೃತಿ, ಆರ್ಥಿಕ ಸ್ಥಿತಿ ಗತಿಗಳು ಇಷ್ಟೊಂದು ಭಿನ್ನವಾಗಿರುವಾಗ ಯಾವ ಸಾಮಾಜಿಕ ತಳಹದಿ ಮೇಲೆ ವೀರಶೈವ ಲಿಂಗಾಯತ ಜಂಗಮರಿಗೆ ಎಸ್ಸಿ ಜಾತಿ ಪ್ರಮಾಣ ಪತ್ರ ನೀಡಬೇಕೆಂದು ಪ್ರಶ್ನಿಸಿದ ಅವರು, ರೇಣುಕಾಚಾರ್ಯರ ಕುಟುಂಬದವರು ಹಾಗೂ ಕೆಲ ಮಠಾಧೀಶರು ಸರ್ಕಾರದ ಮೇಲೆ ಒತ್ತಡ ತಂತ್ರ ಅನುಸರಿಸಿ ಎಸ್ಸಿ ಜನಾಂಗದವರ ಅನ್ನಕ್ಕೆ ಕೈ ಹಾಕುವುದನ್ನು ತಪ್ಪಿಸಬೇಕಿದೆ ಎಂದರು.

ತಾಲ್ಲೂಕು ಲಂಬಾಣಿ ಸಮಾಜದ ಅಧ್ಯಕ್ಷ ಅಜ್ಜಾ ನಾಯ್ಕ್ ಮಾತನಾಡಿ, ವೀರಶೈವ ಲಿಂಗಾಯತ ಜಂಗಮರು ಶಿವ, ನಂದಿ, ವೀರಭದ್ರ, ಪಂಚಾಚಾರ್ಯರು, ಬಸವಣ್ಣ, ಈಶ್ವರ ಇತ್ಯಾದಿ ಆರಾಧಿಸುತ್ತಾರೆ. ಆದರೆ ಬೇಡ ಜಂಗಮರು ಪೆದ್ದಿ ಗೋಸ್ವಾಮಿ, ತಿರುಪತಿ ವೈಕುಂಠಪುರ ಇತ್ಯಾದಿ ಇವರ ತೀರ್ಥ ಕ್ಷೇತ್ರವಾಗಿವೆ. ವೀರಶೈವ ಲಿಂಗಾಯತ ಜಂಗಮರು ಹಿರೇಮಠ, ಚಿಕ್ಕಮಠ, ಆರಾಧ್ಯ ಮಠ, ಗದ್ದಿಗ ಮಠ ಎಂದು ಕರೆಯಲ್ಪಡುತ್ತಾರೆ. ಬೇಡ ಜಂಗಮರು ಗಂಧ, ಭೂತ ಇತ್ಯಾದಿ ಉಪನಾಮಗಳನ್ನಿಟ್ಟು ಕೊಳ್ಳುತ್ತಾರೆ. ಅಂತ್ರಾಪಲಜಿ ಸರ್ವೇ ಆಫ್ ಇಂಡಿಯಾ ಇದನ್ನು ದೃಢೀಕರಿಸಿದೆ ಎಂದಿದ್ದಾರೆ.

ತಾಪಂ ಮಾಜಿ ಅಧ್ಯಕ್ಷ ವೀರಭದ್ರಪ್ಪ ಆದಾಪುರ ಮಾತನಾಡಿ, ಈ ವಿಷಯದಲ್ಲಿ ಸ್ಪಷ್ಟ ನಿಲುವು ಪ್ರಕಟಿಸದಿದ್ದರೆ ರಾಜ್ಯದ ಬಿಜೆಪಿ ಸರ್ಕಾರವೂ ದಲಿತರ ಅನ್ನಕ್ಕೆ ಅಪಚಾರ ಎಸಗುವ ಕೃತ್ಯದಲ್ಲಿ ಭಾಗಿಯಾಗಿದೆ ಎಂದೇ ಭಾವಿಸಬೇಕಾಗುತ್ತದೆ ಎಂದಿದ್ದಾರೆ.

ಡಾ.ರೇವಣಸಿದ್ದಪ್ಪ ಶಂಷೀಪುರ ಮಾತನಾಡಿದರು.

ಸಭೆಯಲ್ಲಿ ಹೆಚ್.ಎಂ.ಗುಡದಯ್ಯ ರಾಜನಹಳ್ಳಿ, ರಘು ಎನ್., ಭೀಮಪ್ಪ ಭೋವಿ, ಹರಳಹಳ್ಳಿ ಗ್ರಾಪಂ ಉಪಾಧ್ಯಕ್ಷ ಮಂಜಪ್ಪ ಗುಳದಹಳ್ಳಿ, ಭಾನುವಳ್ಳಿ ಗ್ರಾಪಂ ಸದಸ್ಯ ಮಂಜಪ್ಪ, ಅಣ್ಣಪ್ಪ ಸ್ವಾಮಿ ಎಸ್., ಕೆ.ಗುಡದಪ್ಪ ಮಲ್ಲನಾಯಕನಹಳ್ಳಿ, ರಾಜೇಶ್ ಬಿ.ಹೆಚ್. ಅಮರಾವತಿ, ಎನ್.ಕುಮಾರ ನಾಯಕ್ ಯಲವಟ್ಟಿ, ರವಿ ನಾಯ್ಕ್, ಮಲ್ಲಾನಾಯ್ಕ್, ಬುಡಗ ಸಮಾಜದ ಚಿನ್ನಯರೆಡ್ಡಿ, ಚೌಡಪ್ಪ ಸಿ. ಭಾನುವಳ್ಳಿ, ಸುಂಕಪ್ಪ, ದುರುಗಪ್ಪ ಸಿಂಧೋಳ್, ನವೀನ್, ಬಿ.ಕರಿಯಪ್ಪ, ಬಿ.ಮೋತ್ಯಾ ನಾಯ್ಕ್ ಮತ್ತಿತರರು ಉಪಸ್ಥಿತರಿದ್ದರು.

# ಜನತೆ ಗುಡಿಸಲು ತೆರವುಗೊಳಿಸಿದರೆ ಸುಸಜ್ಜಿತ ಮನೆಗಳ ನಿರ್ಮಾಣ

## ನ್ಯಾಮತಿ ಕಾರ್ಯಕ್ರಮದಲ್ಲಿ ಶಾಸಕ ಎಂ.ಪಿ.ರೇಣುಕಾಚಾರ್ಯ ಭರವಸೆ



ನ್ಯಾಮತಿ, ಜು. 17- ಪಟ್ಟಣದ ಶಿವಾನಂದಪ್ಪ ಬಡಾವಣೆಯಲ್ಲಿರುವ 87 ಕುಟುಂಬಗಳು ಗುಡಿಸಲು ತೆರವು ಮಾಡಿಕೊಟ್ಟರೇ, ಅವರಿಗೆ ಸ್ಲಂ ಬೋಡ್‌ನಿಂದ ಮನೆ ಕಟ್ಟಿಸಿಕೊಡುವ ಜವಾಬ್ದಾರಿ ನಮ್ಮದೆಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶಿವಾನಂದಪ್ಪ ಬಡಾವಣೆಯ ಜನರ ಕುಂದುಕೊರತೆ ಸಭೆ ನಡೆಸಿ ಅವರು ಮಾತನಾಡಿದರು.

ಈಗಾಗಲೇ ಶಿವಾನಂದಪ್ಪ ಬಡಾವಣೆಯ, 74 ಜನರಿಗೆ ಪಟ್ಟವನ್ನು ಕೊಟ್ಟಿದ್ದು ಇನ್ನು 13 ಜನರಿಗೆ ಪಟ್ಟು ಕೊಡುವುದು ಬಾಕಿ ಇದ್ದು ಅವರಿಗೂ ಪಟ್ಟು ಕೊಡಿಸುವುದರ ಜೊತೆಗೆ ಸ್ಲಂ ಬೋಡ್‌ನಿಂದ ಸುಸಜ್ಜಿತವಾದ ಮನೆ ನಿರ್ಮಿಸಿ ಕೊಡುವುದಾಗಿ ಹೇಳಿದರು.

ಈಗಾಗಲೇ ಶಿವಾನಂದಪ್ಪ ಬಡಾವಣೆಯನ್ನು ಸ್ಲಂ ಬೋಡ್‌ನವರಿಗೆ ಹಸ್ತಾಂತರಿಸಿದ್ದು ಜನರು ಮನೆ ತೆರವು ಮಾಡಿಕೊಟ್ಟರೆ ಅವರಿಗೆ ಸ್ಲಂ ಬೋಡ್‌ನಿಂದ ಸುಸಜ್ಜಿತವಾದ, ಎಲ್ಲಾ ಮೂಲಸೌಕರ್ಯದೊಂದೊದಿಗೆ ಮನೆ ಕಟ್ಟಿಸಿಕೊಡಲಾಗುವುದು ಎಂದರು.

ನ್ಯಾಮತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿ, ಮೂರು ಸ್ಲಂಗಳನ್ನು ಬೋರ್ಡಗಳನ್ನ ಗುರುತಿಸಲಾಗಿದ್ದು, ಅವುಗಳನ್ನು ಅಭಿವೃದ್ದಿ ಮಾಡಲಾಗುವುದು ಎಂದ ಶಾಸಕರು, ನ್ಯಾಮತಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿದ್ದರಿಂದ ಸರ್ಕಾರದಿಂದ ಐದು ಕೋಟಿ ಅನುದಾನ ಬಂದಿದೆ ಎಂದರು.

ನ್ಯಾಮತಿ ಪಟ್ಟಣ ಪಂಚಾಯತಿ ಮಾಡಿಸಿದ್ದು, ಕುಡಿಯುವ ನೀರಿಗೆ 44 ಕೋಟಿ ಹಾಗೂ ಒಳಚರಂಡಿಗೆ 33 ಕೋಟಿ ರೂಪಾಯಿ ಅನುದಾನವನ್ನು ಸಿಎಂ ಮಂಜೂರು ಮಾಡಿಸಿಕೊಟ್ಟಿದ್ದಾರೆ ಎಂದ ಶಾಸಕರು, 10 ಬೆಡ್ ಇದ್ದ ನ್ಯಾಮತಿ ಆಸ್ಪತ್ರೆಯನ್ನು 30 ಹಾಸಿಗೆಯಾಗಿ ಮೇಲ್ದರ್ಜೆಗೇರಿಸಿದ್ದು, ಇದೀಗ 100 ಹಾಸಿಗೆಯನ್ನಾಗಿ ಮೇಲ್ದರ್ಜೆಗೇರಿಸಲು ಸಂಬಂಧಪಟ್ಟ ಸಚಿವರಿಗೆ ಮನವಿ ಮಾಡಿದ್ದು, ನೂರಕ್ಕೆ ನೂರು 100 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುತ್ತೇನೆ ಎಂದರು.

ನ್ಯಾಮತಿ ಪಟ್ಟಣದ ಕುಂಬಾರ್ ಬೀದಿ, ಆಂಜನೇಯ ಬೀದಿ, ವಾಲ್ಮೀಕಿ ಬೀದಿ, ಈಶ್ವರ ದೇವಸ್ಥಾನದ ಬೀದಿ ರಸ್ತೆ ಅಗಲೀಕರಣ ಮಾಡಿ, ಅಲಂಕಾರಿಕ ವಿದ್ಯುತ್ ದೀಪಗಳ ಅಳವಡಿಕೆ ಕಾಮಗಾರಿಗಳನ್ನು ಮಾಡಿಸುತ್ತಿದ್ದು, ನ್ಯಾಮತಿ ಪಟ್ಟಣವನ್ನು ಸುಂದರ ಪಟ್ಟಣವನ್ನಾಗಿ ಮಾಡುತ್ತೇನೆಂದರು.

ಶಾಸಕರ ಮನವಿಗೆ ಸ್ಪಂದಿಸಿದ ಶಿವಾನಂದಪ್ಪ ಬಡಾವಣೆಯ ನಿವಾಸಿಗಳು ಗುಡಿಸಲು ತೆರವು ಮಾಡಿಕೊಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭ ತಹಶೀಲ್ದಾರ್ ರೇಣುಕಾ, ಪಟ್ಟಣ ಪಂಚಾಯತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಕೊಟ್ರೇಶ್, ಸ್ಲಂ ಬೋಡ್ ಎಇಇ ಕಪಾಲಿಗೌಡ, ಜೆ.ಇ.ಸಿದಾರ್ಥ ಸೇರಿದಂತೆ ಮುಖಂಡರಾದ ಎಸ್.ಪಿ.ರವಿಕುಮಾರ್, ಸಿ.ಕೆ.ರವಿಕುಮಾರ್, ಅಜಯ್ ರೆಡ್ಡಿ ಸೇರಿದಂತೆ ಮತ್ತಿತರಿದ್ದರು.

# ನಗರದಲ್ಲಿ ಇಂದು ಉಚಿತ ಕೋವಿಡ್ ಬೂಸ್ಟರ್ ಲಸಿಕಾಕರಣದ ಉದ್ಘಾಟನೆ

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಇಂದಿನಿಂದ ಸೆಪ್ಟೆಂಬರ್ 30 ರವರೆಗೆ 75 ದಿನಗಳ ಕಾಲ ಉಚಿತ ಕೋವಿಡ್ ಮುನ್ನೆಚ್ಚರಿಕಾ ಲಸಿಕಾಕರಣ ಹಮ್ಮಿಕೊಂಡಿದ್ದು, ಲಸಿಕಾಕರಣದ ಉದ್ಘಾಟನಾ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಡಿಇಐಸಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಕೋವಿಡ್ ಮುನ್ನೆಚ್ಚರಿಕಾ ಲಸಿಕೆಯನ್ನು 18 ರಿಂದ 59 ವರ್ಷದವರೆಗಿನ ಎಲ್ಲಾ ಅರ್ಹ ಫಲಾನುಭವಿಗಳು ಪಡೆದುಕೊಳ್ಳುವಂತೆ ಡಿಹೆಚ್‌ಓ ತಿಳಿಸಿದ್ದಾರೆ.

# ಮಾಚಿದೇವ ಅಭಿವೃದ್ಧಿ ನಿಗಮದಿಂದ ಸ್ವಯಂ ಉದ್ಯೋಗ-ಸಾಲಕ್ಕೆ ಅರ್ಜಿ

ದಾವಣಗೆರೆ,ಜು.17- ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ 2022-23ನೇ ಸಾಲಿನ ಸ್ವಯಂ ಉದ್ಯೋಗ ನೇರ ಸಾಲ ಹಾಗೂ ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಗಳ ಅನುಕೂಲಕ್ಕಾಗಿ ಹಿಂದುಳಿದ ವರ್ಗಗಳ ಮಡಿವಾಳ ಮತ್ತು ಅದರ ಉಪಜಾತಿಗಳಿಗೆ ಸೇರಿದ ಜನರ ಆರ್ಥಿಕ ಅಭಿವೃದ್ಧಿಗಾಗಿ ಅರ್ಜಿ ಆಹ್ವಾನಿಸಲಾಗಿದೆ ಆಗಸ್ಟ್ 3 ಕೊನೆಯ ದಿನವಾಗಿದೆ. ಮಾಹಿತಿಗೆ 08192-230934 ಸಂಪರ್ಕಿಸಬಹುದು ಎಂದು ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಕ್ಕಡಗಾತ್ರಿ : ತುಂಗಭದ್ರಾ ನದಿಯಲ್ಲಿ ಕೊಚ್ಚಿ ಹೋದ ಯುವಕ, ಹುಡುಕಾಟ



ಮಲೇಬೆನ್ನೂರು, ಜು.17- ಸ್ನಾನ ಮಾಡಲು ಹೋದಾಗ ಯುವಕನೋರ್ವ ಕಾಲು ಜಾರಿ ಬಿದ್ದು ನದಿಯಲ್ಲಿ ಕೊಚ್ಚಿ ಹೋದ ಘಟನೆ ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಶನಿವಾರ ಬೆಳಿಗ್ಗೆ ನಡೆದಿದೆ.

ಚನ್ನಗಿರಿ ತಾಲ್ಲೂಕು ರಾಮಗೊಂಡನಹಳ್ಳಿ ತಾಂಡಾದ ಪರಮೇಶ್ವರನಾಯ್ಕ (35 ವರ್ಷ) ಎಂಬಾತ ಕಳೆದ ಒಂದು ವಾರದಿಂದ ಉಕ್ಕಡಗಾತ್ರಿಯ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನದಲ್ಲಿ ಅನಾರೋಗ್ಯದ ಕಾರಣ ಇದ್ದರು ಎನ್ನಲಾಗಿದೆ.

ಶನಿವಾರ ಬೆಳಿಗ್ಗೆ ದೇವಸ್ಥಾನದಲ್ಲಿ ದಿಂಡು ಉರುಳು ಸೇವೆ ಸಲ್ಲಿಸಿದ ನಂತರ ಸ್ನಾನ ಮಾಡಲು ನದಿ ಹಿನ್ನೀರಿಗೆ ಹೋದಾಗ ಕಾಲು ಜಾರಿ ನೀರಿನ ಸೆಳೆತದಲ್ಲಿ ಪರಮೇಶ್ವರ ನಾಯ್ಕ ಕೊಚ್ಚಿ ಹೋಗಿದ್ದಾನೆ.

ಈ ಸಂದರ್ಭದಲ್ಲಿ ಜೊತೆಗಿದ್ದ ತಾಯಿ, ಸಹೋದರ, ಅಳಿಯ ಅವರುಗಳು ಪರಮೇಶ್ವರ ನಾಯ್ಕನನ್ನು ಹಿಡಿಯಲು ಮಾಡಿದ ಪ್ರಯತ್ನ ವಿಫಲವಾಗಿದೆ.

ವಿಷಯ ತಿಳಿದ ತಕ್ಷಣ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಅವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಎಎಸ್ಪಿ ಆರ್. ಬಿ.ಬಸರಗಿ, ಉಪವಿಭಾಗಾಧಿಕಾರಿ ದುರ್ಗಾಶ್ರೀ, ತಹಶೀಲ್ದಾರ್ ಡಾ. ಬಿ.ಎಂ.ಅಶ್ವತ್ಥ್, ಸಿಪಿಐ ತಿಮ್ಮಣ್ಣ, ಪಿಎಸ್ಐ ರವಿಕುಮಾರ್, ಅಗ್ನಿ ಶಾಮಕ ದಳದ ಅಧಿಕಾರಿ ಸುಹಾಸ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಮುಳುಗು ತಜ್ಞರನ್ನು ಕರೆಸಿ, ನದಿಯಲ್ಲಿ ಹುಡುಕಾಟ ನಡೆಸಿದರೂ ರಾತ್ರಿವರೆಗೂ ಪರಮೇಶ್ವರ ನಾಯ್ಕ ಪತ್ತೆ ಆಗಿರಲಿಲ್ಲ. ನದಿಯಲ್ಲಿ ಭಾರೀ ಪ್ರಮಾಣದ ನೀರು ಹರಿಯುತ್ತಿರುವುದರಿಂದ ವ್ಯಕ್ತಿಯ ಹುಡುಕಾಟಕ್ಕೆ ತೊಂದರೆ ಆಗಿದ್ದು, ಭಾನುವಾರವೂ ಕಾರ್ಯಾಚರಣೆ ಮುಂದುವರೆಯುತ್ತಿತ್ತು ಎಂದು ಪಿಎಸ್ಐ ರವಿಕುಮಾರ್ ತಿಳಿಸಿದ್ದಾರೆ.

ಕಣ್ಣು ಎದುರಿಗೆಯೇ ಮಗನನ್ನು ಕಳೆದುಕೊಂಡ ತಾಯಿಯ ರೋಧನೆ ಮುಗಿಲು ಮುಟ್ಟಿತ್ತು.

# ತೊಗಟವೀರ ಸಮಾಜ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜು.17- ಶ್ರೀ ತೊಗಟವೀರ ಸಮಾಜ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ತೊಗಟವೀರ ಸಮಾಜದ ಪ್ರತಿಭಾವಂತ ಎಸ್.ಎಸ್‌ಎಲ್.ಸಿಯಲ್ಲಿ ಶೇ.80, ಪಿ.ಯು.ಸಿಯಲ್ಲಿ ಶೇ.80 ಮತ್ತು ಪದವಿಯಲ್ಲಿ ಶೇ.75 ಅಂಕಗಳನ್ನು ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಇದೇ ದಿನಾಂಕ 20ರೊಳಗಾಗಿ ವಿದ್ಯಾರ್ಥಿಗಳು ಅರ್ಜಿಯನ್ನು ಶ್ರೀ ತೊಗಟವೀರ ಸಮುದಾಯ ಭವನದಲ್ಲಿ ಸಲ್ಲಿಸಬೇಕು.

# ಕುಂಬಾರ ಕುಲಾಲ ಪ್ರಜಾಪತಿ ಸಮುದಾಯದ ಸಭೆ

ದಾವಣಗೆರೆ, ಜು. 17- ಕುಂಬಾರ ಕುಲಾಲ ಪ್ರಜಾಪತಿ ಸಮುದಾಯದ ಜಾಗೃತಿ ಸಮಾವೇಶ ಮತ್ತು ಶಕ್ತಿ ಪ್ರದರ್ಶನ ಇದೇ ದಿನಾಂಕ 23 ರಂದು ಶನಿವಾರ ಬೆಳಿಗ್ಗೆ 10.30 ಕ್ಕೆ ಬೆಂಗಳೂರು ಟೌನ್‌ಹಾಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಮಾಜದ ಕುಂಬಾರ ಯುವ ಸೈನ್ಯದ ಜಿಲ್ಲಾಧ್ಯಕ್ಷ ಶಿವಕುಮಾರ್ ಎನ್. ಕುಂಬಾರ ತಿಳಿಸಿದ್ದಾರೆ.

# ಹರಿಹರೇಶ್ವರ ದೇವಾಲಯದ ಸೌಲಭ್ಯಗಳಿಗೆ ಡಿ.ಸಿ. ಸೂಚನೆ







ಹರಿಹರ, ಜು.17 - ನಗರದ ಐತಿಹಾಸಿಕ ಶ್ರೀ ಹರಿಹರೇಶ್ವರ ಮತ್ತು ಲಕ್ಷ್ಮಿ ದೇವಸ್ಥಾನಕ್ಕೆ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಭೇಟಿಕೊಟ್ಟು ಪೂಜೆ ಸಲ್ಲಿಸಿದರು.

ದೇವಾಲಯವನ್ನು ವೀಕ್ಷಿಸಿದ ನಂತರ ಮಾತನಾಡಿದ ಅವರು, ಇದಕ್ಕೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಬಳಿ ಚರ್ಚೆ ಮಾಡಿ ದೇವಸ್ಥಾನಕ್ಕೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಸೂಚನೆ ನೀಡಲಾಗುವುದು ಎಂದರು.

ಭಕ್ತರು ದೇವಸ್ಥಾನದ ಹಿಂಬದಿಯ ತುಂಗಭದ್ರಾ ನದಿಗೆ ತೆರಳಲು ಇರುವ ಮೆಟ್ಟಿಲು ರಸ್ತೆಯನ್ನು ಶೀಘ್ರವೇ ದುರಸ್ತಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ದೇವಸ್ಥಾನದ ವತಿಯಿಂದ ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ್ ಎಂ. ಬಿ.ಅಶ್ವತ್ಥ್ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್, ನಗರಸಭೆ ಅಧ್ಯಕ್ಷೆ ಶಾಹೀನಾ ಬಾನು ದಾದಾಪೀರ್, ಸದಸ್ಯ ಕೆ.ಜಿ. ಸಿದ್ದೇಶ್, ತಾಲ್ಲೂಕು ಆಡಳಿತದ ವಿ.ಎ. ಸಮೀರ್, ದೇವರಾಜ್, ದೇವಸ್ಥಾನದ ಆಡಳಿತ ಅಧಿಕಾರಿ ವಾರಿಜಾ ವೆಂಕಟೇಶ , ಅರ್ಚಕರಾದ ಗುರುರಾಜ್ ಶಶಿಕಾಂತ್, ಶೇಷಾಚಲ ಉಪಸ್ಥಿತರಿದ್ದರು.

# ನಗರಕ್ಕೆ ಇಂದು ವಿಧಾನಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ




ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಇಂದು ರಾತ್ರಿ 8 ಗಂಟೆಗೆ ನಗರಕ್ಕೆ ಆಗಮಿಸಿ, ವಾಸ್ತವ್ಯ ಮಾಡುವರು. ನಾಳೆ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾಡಳಿತದಿಂದ ಏರ್ಪಡಿಸಲಾಗಿರುವ ಚುನಾವಣಾ ಸುಧಾರಣಾ ಕ್ರಮಗಳ ಬಗ್ಗೆ ಸಂವಾದ ಕಾರ್ಯಕ್ರಮದಲ್ಲಿ ಕಾಗೇರಿ ಭಾಗವಹಿಸುವರು.

ನಂತರ ಮಧ್ಯಾಹ್ನ 3.30ಕ್ಕೆ ಶಾಸಕ ಎಸ್.ಎ. ರವೀಂದ್ರನಾಥ್ ಇವರ ಕುರಿತಾದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸುವರು.

ಸಂಜೆ 5 ಗಂಟೆಗೆ ರಾಣೇಬೆನ್ನೂರಿಗೆ ಪ್ರಯಾಣಿಸುವರು.

# ಉಪ್ಪಾರ ಅಭಿವೃದ್ಧಿ ನಿಗಮದಿಂದ ಸಾಲ ಸೌಲಭ್ಯ

ದಾವಣಗೆರೆ,ಜು.17- ಉಪ್ಪಾರ ಅಭಿವೃದ್ಧಿ ನಿಗಮದಿಂದ ಹಿಂದುಳಿದ ವರ್ಗಗಳ ಪ್ರವರ್ಗ-1ರ 53(ಎ) ರಿಂದ 5(ವಿ) ವರೆಗಿನ ಉಪ್ಪಾರ ಮತ್ತು ಇದರ ಉಪಜಾತಿಗೆ ಸೇರಿದ ಜನರ ಆರ್ಥಿಕ ಅಭಿವೃದ್ಧಿಗಾಗಿ ಸಾಲ ಮತ್ತು ಸಹಾಯಧನ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ತಂತ್ರಾಂಶದ ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಆಗಸ್ಟ್ 12 ಕೊನೆ ದಿನ.



## ಆರ್.ಎಂ ಚನ್ನಬಸಮ್ಮ ನಿಧನ

ದಾವಣಗೆರೆ ವಿನೋಬ ನಗರ ವಾಸಿ
ಶ್ರೀ ಆರ್.ಎಂ. ವಿರೂಪಾಕ್ಷಯ್ಯ ಅವರ ಧರ್ಮಪತ್ನಿ
**ಆರ್.ಎಂ. ಚನ್ನಬಸಮ್ಮ (92)**
ಇವರು ದಿನಾಂಕ 17.7.2022ರಂದು ಲಿಂಗೈಕ್ಯರಾಗಿದ್ದಾರೆ. ಪುತ್ರ, ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.7.2022ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆಯ ಗಾಂಧಿನಗರದ ಹಿಂದೂ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ**

## ವಿಜಯಮ್ಮ ಹೆಚ್.ಎಂ ನಿಧನ



ದಾವಣಗೆರೆ ಎಸ್.ಎಸ್ ಬಡಾವಣೆ 'ಬಿ' ಬ್ಲಾಕ್ ವಾಸಿ ಲಿಂಗೈಕ್ಯ ಅಣ್ಣಪ್ಪ ಸ್ವಾಮಿ ಇವರ ಧರ್ಮಪತ್ನಿ
**ವಿಜಯಮ್ಮ ಹೆಚ್.ಎಂ.**
ಇವರು ದಿನಾಂಕ 16.7.2022ರ ಶನಿವಾರ ರಾತ್ರಿ 3 ಗಂಟೆಗೆ ನಿಧನರಾದೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.7.2022ರ ಭಾನುವಾರ ಮಧ್ಯಾಹ್ನ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.
**ಇಂತಿ ದುಃಖತಪ್ತ ಕುಟುಂಬ ವರ್ಗ**
**ಶ್ರೀಮತಿ ಮತ್ತು ಶ್ರೀ ಉಮೇಶ್.ಹೆಚ್.ಎಂ** ಮಾಲೀಕರು ರಕ್ಷಂದ ಇಂಡಸ್ಟ್ರೀಸ್ ಹಾಗೂ ಕಾರ್ಯದರ್ಶಿ ದಾವಣಗೆರೆ ಸ್ಟೀಲ್ ಫ್ಯಾಬ್ರಿಕೇಟರ್ಸ್ ಅಸೋಸಿಯೇಷನ್ಸ್ (ರಿ.)
**ಶ್ರೀಮತಿ ಮತ್ತು ಶ್ರೀ ಪ್ರಕಾಶ್ ಹೆಚ್.ಎಂ** ಎಫ್.ಡಿ.ಎ.ಎ ಕರ್ನಾಟಕ ನೀರಾವರಿ ನಿಗಮ, ಧಾರವಾಡ.
**ಶ್ರೀಮತಿ ಮತ್ತು ಶ್ರೀ ರವೀಂದ್ರನಾಥ್ ಕೆ.ಎಂ.** ನಿವೃತ್ತ ಪ್ರಾಚಾರ್ಯರು ಹಾಗೂ ಬಂಧು-ಬಳಗದವರು.

# ಅಪವಿತ್ರ ಮೈತ್ರಿಯ ಫಲವಾಗಿ ಚರಿತ್ರೆ ಅಪವ್ಯಾಖ್ಯಾನಕ್ಕೆ ಗುರಿಯಾಗಿದೆ

(1ನೇ ಪುಟದಿಂದ) ಕಲಮರಹಳ್ಳಿ ಮಾತನಾಡಿ, ಧರ್ಮ ಮತ್ತು ರಾಜಕಾರಣದ ಅಪವಿತ್ರ ಮೈತ್ರಿಯ ಫಲವಾಗಿ ಚರಿತ್ರೆ ಅಪವ್ಯಾಖ್ಯಾನಕ್ಕೆ ಗುರಿಯಾಗಿದೆ. ಇಂತಹ ಸಂದರ್ಭದಲ್ಲಿ ಹಿಜಾಬ್, ಹಲಾಲ್ ಕಟ್ ಮುಂತಾದ ವಿಚಾರಗಳೇ ಮುನ್ನೆಲೆಗೆ ಬರುತ್ತಿವೆ. ಜನ ಸಾಮಾನ್ಯರು ಬಲಿ ಪೀಠಕ್ಕೆ ಆಹುತಿಯಾಗುತ್ತಾರೆ ಎಂದರು. ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ಕುಲ ಮೂಲದ ಕುರಿತು ಗ್ರಂಥ ಹೊರ ತಂದಿರುವುದು ಪ್ರತಿ ಸಂಸ್ಕೃತಿಯ ಪ್ರತೀಕವಾಗಿದೆ. ಈ ರೀತಿಯ ಅಧ್ಯಯನ, ಸಂಶೋಧನೆ ಕುರಿತ ಗ್ರಂಥ ಲೋಕಾರ್ಪಣೆ ಕಾರ್ಯವನ್ನು ಎಲ್ಲಾ ತಳ ಸಮುದಾಯಗಳು ಮಾಡಬೇಕೆಂದು ಸಲಹೆ ನೀಡಿದರು.

ಯೋಜನಾ ನಿರ್ದೇಶಕ ಕಾ.ತ. ಚಿಕ್ಕಣ್ಣ ಮಾತನಾಡಿ, 2008 ರಲ್ಲಿ ಕುರುಬರ ಸಂಸ್ಕೃತಿ ದರ್ಶನ ಮಾಲಿಕೆಯ ಗ್ರಂಥಗಳ ರಚನಾ ಕಾರ್ಯ ಆರಂಭಗೊಂಡು, ಸತತ 12 ವರ್ಷಗಳ ಕಾಲ ಕಡತಗಳ ಅಧ್ಯಯನ, ಮಾಹಿತಿ ಸಂಗ್ರಹ, ಬರವಣಿಗೆ, ಪರಿಷ್ಕರಣೆ ಕಾರ್ಯಗಳು ಮುಗಿದು, ಇದೀಗ ಗ್ರಂಥಗಳ ಲೋಕಾರ್ಪಣೆ ಕಾರ್ಯ ನಡೆದಿದೆ ಎಂದರು.

ಓದುವ ಹವ್ಯಾಸ ಸಂಕ್ಷಿಪ್ತಗೊಂಡಿರುವ ಇಂದಿನ ದಿನಮಾನಗಳನ್ನು ಗಮನದಲ್ಲಿಟ್ಟುಕೊಂಡು ಸಾಮಾನ್ಯ ಜನರಿಗಾಗಿ ಪ್ರಮುಖವಾಗಿ 45 ವಿಷಯಗಳ ಕುರಿತ 45 ಜನಪ್ರಿಯ ಪುಸ್ತಕಗಳನ್ನು ಹೊರತರುವ ಬಗ್ಗೆ ಚಿಂತನೆ ನಡೆಸಲಾಗಿದೆ. ಈಗಾಗಲೇ ಐದು ಪುಸ್ತಕಗಳು ಮುದ್ರಣಗೊಂಡಿದ್ದು, ಇನ್ನುಳಿದ ಪುಸ್ತಗಳ ಮುದ್ರಣ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಇಂದು ಲೋಕಾರ್ಪಣೆಗೊಂಡ ಗ್ರಂಥಗಳು ಕೇವಲ ಕುರುಬ ಸಮುದಾಯಕ್ಕೆ ಸೀಮಿತವಾಗಿಲ್ಲ. ಬದಲಾಗಿ ಕುರುಬರು ಒಳಗೊಂಡಂತೆ ಪಶುಪಾಲನಾ ವೃತ್ತಿಯನ್ನು ಅವಲಂಬಿಸಿರುವ ಮೂಲ ಜನಾಂಗದ ಇಡೀ ಸಂಸ್ಕೃತಿ, ಆಚಾರ, ವಿಚಾರ, ಜೀವನ ಶೈಲಿ ಬಿಂಬಿಸುವ ಮೂಲ ದಾಖಲೆಗಳಾಗಲಿವೆ ಎಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕರೂ, ಸಂಸ್ಕೃತಿ ಚಿಂತಕರೂ ಆದ ಡಾ.ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಭಾರತದ ಯಾವ ಸಮುದಾಯವೂ ಮಾಡದ ಕೆಲಸವನ್ನು 'ಕುರುಬ ಸಂಸ್ಕೃತಿ ದರ್ಶನ' ಮಾಲಿಕೆ ಹೊರ ತರುವ ಮೂಲಕ ಕುರುಬರ ಸಾಂಸ್ಕೃತಿಕ ಪರಿಷತ್ತು ಮಾಡಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಅಲಕ್ಷಿತ ಸಮುದಾಯಗಳೆಲ್ಲವೂ ಒಂದಾದರೆ ಎಂತಹ ಸನಾತನ ನೆಲೆಗಳನ್ನು ವಿನಾಶಗೊಳಿಸುವ ಕೆಲಸ ಮಾಡಬಹುದು. ವೈದಿಕ ಶಾಹಿಗಳಿಂದ ಯಜ್ಞ ಯಾಗಾದಿಗಳನ್ನು ಮಾಡಿಸದೇ, ಸಮಾಜದ ಗೊರವರು, ದಾಸಪ್ಪರನ್ನು ಕರೆಸಿ ಪೂಜೆ ಮಾಡಿಸಿ, ಅವರಿಗೆ ಕಾಣಿಕೆ ಕೊಡುವ ಮೂಲಕ ಕುರುಬ ಸಮಾಜದ ಹಿರಿಮೆ, ಗರಿಮೆಯನ್ನು ಹೆಚ್ಚಿಸೋಣ ಎಂದು ಮನವಿ ಮಾಡಿದರು.


ಸಹ ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್ ಮಾತನಾಡಿ, ಒಂದು ಜನಾಂಗದ ಸಾಂಸ್ಕೃತಿಕ ವಿವರಗಳ ಒಳಗಡೆ ಬರುವ ಧಾರೆ ಎಂದರೆ ಆರ್ಥಿಕ ಧಾರೆ. ಅರ್ಥಶಾಸ್ತ್ರ ಜನರಿಗೆ ಅರ್ಥವಾಗುವುದಿಲ್ಲ. ಅಂತಹ ಅರ್ಥವಾಗದೇ ಇರುವ ಅರ್ಥಶಾಸ್ತ್ರವನ್ನು ಜನರ ಮೇಲೆ ಹೇರಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಸೈದ್ಧಾಂತಿಕ ರಾಜಕಾರಣ ರಾಕ್ಷಸ ರಾಜಕಾರಣವಾಗಿ ಬದಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನೀತಿ ಹೇಳುವುದೇ ತಪ್ಪು ಎನ್ನುವಂತಾಗಿದೆ. ನೈತಿಕತೆ ಬಗ್ಗೆ ಮಾತನಾಡಿದರೆ ಅಪರಾಧ, ದೇಶದ್ರೋಹದ ಕೆಲಸ ಎಂದು ಬಿಂಬಿಸುತ್ತಾರೆ. ಹಸಿದವನಿಗೆ ಅನ್ನ ಕೊಡುವ ರಾಜಕಾರಣ ಇಂದಿನ ಅಗತ್ಯ ಎಂದರು.

ಕುಲಗುರುಗಳೂ, ಸಾಹಿತಿಗಳೂ ಆದ ಡಾ. ನಾ. ಲೋಕೇಶ್ ಒಡೆಯರ್ ಮಾತನಾಡಿ, ಜಗತ್ತಿನ ತುಂಬೆಲ್ಲಾ ಕುರುಬ ಜನಾಂಗದವರು ಬೇರೆ ಬೇರೆ ಹೆಸರಿನಲ್ಲಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಆದಿ ಜನಾಂಗದ ಕೀರ್ತಿಗೆ ಭಾಜನರಾದವರು ಕುರುಬರು. ಪ್ರಸ್ತುತ ಸ್ಪರ್ಧಾ ಯುಗದಲ್ಲಿ ನಾವು ಬದುಕುತ್ತಿದ್ದೇವೆ. ನಮ್ಮ ಸ್ಥಾನಮಾನವನ್ನು ಖಚಿತಪಡಿಸಿಕೊಳ್ಳುವ ತುರ್ತು ಅಗತ್ಯಇಂದಿನದಾಗಿದೆ. ಜನ ಬಯಸುವುದನ್ನು ಕೊಡುವ ಬದಲು ಜನರಿಗೆ ಅಗತ್ಯವಾದುದನ್ನು ಕೊಡುವವ ನಿಜವಾದ ನಾಯಕ ಎನಿಸಿಕೊಳ್ಳಲು ಸಾಧ್ಯ ಎಂದು ಹೇಳಿದರು.


ಸಮಾರಂಭದಲ್ಲಿ ಕುಲಗುರುಗಳಾದ ಡಾ. ಉದಯ ಶಂಕರ್ ಒಡೆಯರ್ ಉಪಸ್ಥಿತರಿದ್ದರು. ಮಾಜಿ ಸಚಿವ ಹೆಚ್.ಎಂ. ರೇವಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಮಾಜದ ಮುಖಂಡ ಬಿ.ಎಂ. ಸತೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರೇವಣಸಿದ್ಧಪ್ಪ ಮತ್ತು ಸಂಗಡಿಗರು ಸುಗಮ ಸಂಗೀತ ಕಾರ್ಯಕ್ರಮ ನೆರವೇರಿಸಿಕೊಟ್ಟರು. ಎಸ್.ಎಸ್. ಗಿರೀಶ್ ಸ್ವಾಗತಿಸಿದರು.

## ಎನ್.ಎಂ. ಮುರುಗೇಂದ್ರಯ್ಯ ನಿಧನ



ದಾವಣಗೆರೆ ವಿದ್ಯಾನಗರ 12ನೇ ಕ್ರಾಸ್ ವಾಸಿ ಶ್ರೀ ಗುರು ರೇಣುಕ ಹೋಟೆಲ್ ಮಾಲೀಕರು ಹಾಗೂ ನಿವೃತ್ತ ಶಿಕ್ಷಕರಾದ
**ಎನ್.ಎಂ ಮುರುಗೇಂದ್ರಯ್ಯ**
ಇವರು ದಿನಾಂಕ 17.7.2022ರ ಭಾನುವಾರ ಬೆಳಿಗ್ಗೆ 11.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 18.7.2022ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ
**98864 95259, 97423 51446**

## ಪುಣ್ಯ ಸ್ಮರಣೆ



| | |
|---|---|
| ದಿ॥ ಶ್ರೀ ಮರುಳಸಿದ್ದಪ್ಪ<br>ಕು. ಗಡ್ಡದಗೂಳಿ<br>ಮರಣ : 27.06.1986 | ದಿ॥ ಶ್ರೀಮತಿ ಗುರುಬಸಮ್ಮ<br>ಮ. ಗಡ್ಡದಗೂಳಿ<br>ಮರಣ : 18.07.2000 |

**ನೀವುಗಳು ನಮ್ಮನ್ನು ಅಗಲಿ ಇಂದಿಗೆ ಹಲವು ವರ್ಷಗಳಾದವು. ಸ್ವರ್ಗವಾಸಿಗಳಾದ ನಿಮ್ಮ ಆಶೀರ್ವಾದಗಳಿಂದ ಮುನ್ನಡೆಯುತ್ತಿರುವ ಮತ್ತು ಪ್ರೀತಿ ತುಂಬಿದ ನಿಮ್ಮ ನಡೆ ನುಡಿಯನ್ನು ಸದಾ ಸ್ಮರಿಸುತ್ತಿರುವ...**
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮರಿ ಮೊಮ್ಮಕ್ಕಳು, ರಾಣೇಬೆನ್ನೂರು. ದಾವಣಗೆರೆ ಮತ್ತು ಬೆಂಗಳೂರು.

# ಮುಕ್ತ ವಿವಿ ಪ್ರವೇಶಾತಿ ಆರಂಭ

ದಾವಣಗೆರೆ, ಜು.17- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2022-23ನೇ ಶೈಕ್ಷಣಿಕ ಸಾಲಿನ (ಜುಲೈ ಆವೃತ್ತಿ) ಪ್ರಥಮ ವರ್ಷದ ಬಿ.ಎ/ಬಿ.ಕಾಂ, ಬಿ.ಎಸ್ಸಿ, ಬಿ.ಲಿಬ್, ಐಎಸ್‌ಸಿ, ಬಿಸಿಎ, ಬಿಬಿಎ, ಬಿಸಿಎ, ಎಂ.ಎ/ಎಂ.ಕಾಂ, ಎಂ.ಎ/ಎಂ.ಸಿ.ಜೆ, ಎಂ.ಲಿಬ್‌ಎಸ್‌ಸಿ, ಎಂ.ಬಿ.ಎ, ಎಂ.ಎಸ್‌ಸಿ ಸ್ನಾತಕ, ಸ್ನಾತಕೋತ್ತರ ಪದವಿಗಳಿಗೆ ಮತ್ತು ಪಿಜಿ ಡಿಪ್ಲೋಮಾ, ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸ್ ಗಳಿಗೆ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿದೆ.

ಬಿ.ಪಿ.ಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿನಿಯರಿಗೆ, ಡಿಫೆನ್ಸ್ ಹಾಗೂ ಎಕ್ಸ್ ಸರ್ವೀಸ್‌ಮನ್ ವಿದ್ಯಾರ್ಥಿಗಳಿಗೆ ಹಾಗೂ ಆಟೋ, ಕ್ಯಾಬ್ ಚಾಲಕರುಗಳ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುವುದು. ಕೋವಿಡ್-19 ನಿಂದ ಮೃತಪಟ್ಟವರ ಮಕ್ಕಳಿಗೆ, ತೃತಿಯ ಲಿಂಗಿಗಳಿಗೆ, ದೃಷ್ಟಿಹೀನ ವಿದ್ಯಾರ್ಥಿಗಳಿಗೆ (ಬಿ.ಇಡಿ, ಎಂ.ಬಿ.ಎ ಕೋರ್ಸ್‌ಗಳನ್ನು ಹೊರತು ಪಡಿಸಿ) ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ.

ವಿವರಕ್ಕೆ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್ ಸೈಟ್ ವೀಕ್ಷಿಸಬೇಕು. ಅಥವಾ ಮೊಬೈಲ್ 9916009318, 8095939359, 6363739884, 9008905457 ಯನ್ನು ಸಂಪರ್ಕಿಸಲು ದಾವಣಗೆರೆ ಕ.ರಾ.ಮು.ವಿ. ಪ್ರಾದೇಶಿಕ ನಿರ್ದೇಶಕ ಡಾ. ವಿಜಯ್ ಪ್ರಕಾಶ್ ತಿಳಿಸಿದ್ದಾರೆ.

# ಪಾರ್ಸಿಗಳು ಹೆಚ್ಚು ಮಕ್ಕಳನ್ನು ಹೊಂದಲು ಕೇಂದ್ರದ ಯೋಜನೆ

ನವದೆಹಲಿ, ಜು. 17 – ಜನಸಂಖ್ಯಾ ನಿಯಂತ್ರಣಕ್ಕಾಗಿ ಸರ್ಕಾರ ಒತ್ತು ನೀಡುವುದು ಸಾಮಾನ್ಯ. ಆದರೆ, ಪಾರ್ಸಿಗಳ ವಿಷಯದಲ್ಲಿ ಸರ್ಕಾರದ ನೀತಿ ಪ್ರತ್ಯೇಕವಿದೆ. ಪಾರ್ಸಿ ಸಮುದಾಯದ ಜನಸಂಖ್ಯೆ ಹೆಚ್ಚಿಸುವ ಸಲುವಾಗಿ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಆನ್‌ಲೈನ್ ಡೇಟಿಂಗ್ ವ್ಯವಸ್ಥೆ ರೂಪಿಸಿದೆ.

ಪಾರ್ಸಿ ಸಮುದಾಯದ ಶೇ.30ರಷ್ಟು ವಯಸ್ಕರು ಅವಿವಾಹಿತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಮದುವೆಗೆ ಅರ್ಹರಾಗಿರುವವರಲ್ಲಿ ಮದುವೆಯ ಆಸಕ್ತಿ ತರಿಸಲು ಸರ್ಕಾರ ಈ ಕ್ರಮ ತೆಗೆದುಕೊಂಡಿದೆ.

ಪಾರ್ಸಿಗಳಿಗಾಗಿ ಸಚಿವಾಲಯ ರೂಪಿಸಿರುವ ಜಿಯೋ ಪಾರ್ಸಿ ಯೋಜನೆಯಡಿ ಆನ್‌ಲೈನ್ ಡೇಟಿಂಗ್ ಹಾಗೂ ಮದುವೆಗೆ ಆಪ್ತಸಮಾಲೋಚನೆ ಮಾಡುವ ವೆಬ್ ತಾಣ ಆರಂಭಿಸಿದೆ.

ಪಾರ್ಸಿ ಸಮುದಾಯದವರು ಮದುವೆಯಾಗುವುದು ಹಾಗೂ ಮಕ್ಕಳನ್ನು ಹೊಂದುವುದು ಮುಖ್ಯವಾಗಿದೆ. ಸಮುದಾಯದಲ್ಲಿ ಮಕ್ಕಳಾಗುವ ಪ್ರಮಾಣ ದಂಪತಿಗೆ ಕೇವಲ 0.8ರಷ್ಟಿದೆ. ಪ್ರತಿ ವರ್ಷ ಸಮುದಾಯದ 800 ಜನ ಸಾವನ್ನಪ್ಪುತ್ತಿದ್ದಾರೆ. ಆದರೆ, ಸಮುದಾಯದಲ್ಲಿ ಕೇವಲ 200-300 ಮಕ್ಕಳು ಜನಿಸುತ್ತಿದ್ದಾರೆ ಎಂದು ಈ ಯೋಜನೆ ಜಾರಿಗೆ ತರುವಲ್ಲಿ ಕೈ ಜೋಡಿಸಿರುವ ಸಂಸ್ಥೆಗಳಲ್ಲಿ ಒಂದಾದ ಪರ್ಜಾರ್ ಫೌಂಡೇಷನ್ ನಿರ್ದೇಶಕರಾದ ಶೆರನಾಜ್ ಕಾಮಾ ಹೇಳಿದ್ದಾರೆ. ಇತ್ತೀಚಿನ ರಾಷ್ಟ್ರೀಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಮೀಕ್ಷೆಯ ಪ್ರಕಾರ, ಜನನ ಫಲವತ್ತತೆ ಮುಸ್ಲಿಮರಲ್ಲಿ 2.36 ಆಗಿದೆ. ಹಿಂದೂಗಳಲ್ಲಿ 1.94, ಕ್ರಿಶ್ಚಿಯನ್ನರಲ್ಲಿ 1.88 ಹಾಗೂ ಸಿಖ್ ಸಮುದಾಯದಲ್ಲಿ 1.61 ಆಗಿದೆ.

1941ರಲ್ಲಿ ದೇಶದಲ್ಲಿ ಪಾರ್ಸಿಗಳ ಸಂಖ್ಯೆ 1.14 ಲಕ್ಷ ಆಗಿತ್ತು. 2011ರ ವೇಳೆಗೆ ಅವರ ಸಂಖ್ಯೆ 57,264ಕ್ಕೆ ಇಳಿದಿದೆ. ಪಾರ್ಸಿಗಳಲ್ಲಿ ಜನನ ಪ್ರಮಾಣ ಹೆಚ್ಚಿಸಲು ಕೇಂದ್ರ ಸರ್ಕಾರ 2013ರಲ್ಲಿ ಜಿಯೋ ಪಾರ್ಸಿ ಯೋಜನೆ ಆರಂಭಿಸಿತ್ತು. ಯೋಜನೆಗಾಗಿ ಪ್ರತಿ ವರ್ಷಕ್ಕೆ 4-5 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಪಾರ್ಸಿ ಪುರುಷರು ಹಾಗೂ ಮಹಿಳೆಯರಲ್ಲಿ ಸ್ವತಂತ್ರ ಮನೋಭಾವ ಬಲವಾಗಿದೆ. ಅಲ್ಲದೇ ಹಿರಿಯರನ್ನು ನೋಡಿಕೊಳ್ಳುವ ಜವಾಬ್ದಾರಿಯೂ ಸಾಕಷ್ಟು ಜನರಲ್ಲಿದೆ. ಇದರಿಂದಾಗಿ ಸಾಕಷ್ಟು ಜನರು ಮದುವೆ ವಯಸ್ಸಿಗೆ ಬಂದಿದ್ದರೂ ಮದುವೆಗೆ ಮುಂದಾಗುತ್ತಿಲ್ಲ. ಪರಿಸ್ಥಿತಿ ಹೇಗಾಗಿದೆ ಎಂದರೆ ಕೆಲವು ಕುಟುಂಬಗಳಲ್ಲಿ ದಂಪತಿಗಳು ಎಂಟು ಹಿರಿಯರ ಜವಾಬ್ದಾರಿ ನೋಡಿಕೊಳ್ಳಬೇಕಾಗಿದೆ ಎಂದು ಕಾಮಾ ಹೇಳಿದ್ದಾರೆ.

# ಸೋನಿಯಾ ಗಾಂಧಿ ವಿಚಾರಣೆ ವಿರುದ್ಧ 21ರಂದು ಪ್ರತಿಭಟನೆ : ಡಿಕೆಶಿ

ಬೆಂಗಳೂರು, ಜು. 17 – ಜಾರಿ ನಿರ್ದೇಶನಾಲಯದಿಂದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ವಿಚಾರಣೆ ನಡೆಸುವುದರ ವಿರುದ್ಧ ಇದೇ ದಿನಾಂಕ 21ರಂದು ಪ್ರತಿಭಟನೆ ನಡೆಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಆ ದಿನದಂದು ಫ್ರೀಡಂ ಪಾರ್ಕ್‌ನಿಂದ ರಾಜಭವನ ಚಲೋ ಹಮ್ಮಿಕೊಂಡಿದ್ದೇವೆ. ದಿನಾಂಕ 22ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದವರು ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕತ್ವ ಹಾಗೂ ಪ್ರತಿಪಕ್ಷಗಳ ನಾಯಕರನ್ನು ಗುರಿ ಮಾಡಿಕೊಂಡು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದವರು ಆರೋಪಿಸಿದ್ದಾರೆ.

ಸುಳ್ಳು ಪ್ರಕರಣಗಳನ್ನು ದಾಖಲಿಸುತ್ತಿರುವುದರ ವಿರುದ್ಧ ಸೋನಿಯಾ ಗಾಂಧಿಯವರಿಗೆ ನಾವು ಶಕ್ತಿ ತುಂಬುವ ಕೆಲಸ ಮಾಡಬೇಕಿದೆ. ನಾವು ಇಂತಹದಕ್ಕೆಲ್ಲ ಹೆದರುವುದಿಲ್ಲ ಎಂಬ ಸಂದೇಶ ನೀಡಬೇಕಿದೆ ಎಂದವರು ತಿಳಿಸಿದ್ದಾರೆ.

ಸೋನಿಯಾ ಗಾಂಧಿ ಕುಟುಂಬ ತ್ಯಾಗದ ಮತ್ತೊಂದು ಹೆಸರು. ಸೋನಿಯಾ ಗಾಂಧಿ ಅವರು 2004ರಲ್ಲಿ ಪ್ರಧಾನ ಮಂತ್ರಿ ಹುದ್ದೆ ತ್ಯಾಗ ಮಾಡಿದ್ದರು. ಅವರು ಡಾ. ಮನಮೋಹನ್ ಸಿಂಗ್ ಅವರಂತಹ ಆರ್ಥಿಕ ತಜ್ಞರನ್ನು ಪ್ರಧಾನ ಮಂತ್ರಿ ಮಾಡಿದರು. ಅವರ ನಾಯಕತ್ವದಲ್ಲಿ ಕಾಂಗ್ರೆಸ್ ಹತ್ತು ವರ್ಷ ಅಧಿಕಾರದಲ್ಲಿತ್ತು. ದೇಶ ಹಾಗೂ ಪಕ್ಷದ ರಕ್ಷಣೆಗಾಗಿ ನಾವು ಅವರನ್ನು ರಾಜಕೀಯಕ್ಕೆ ಕರೆ ತಂದಿದ್ದೆವು ಎಂದವರು ತಿಳಿಸಿದ್ದಾರೆ.

ಬಿಜೆಪಿ ಏನು ಮಾಡಿದೆ? ದೇಶಕ್ಕಾಗಿ ಅದರ ಕೊಡುಗೆ ಏನು? ಅವರು ರಾಷ್ಟ್ರಧ್ವಜದ ಬಗ್ಗೆ ಆಗ ಮಾತನಾಡುತ್ತಿದ್ದಾರೆ. ಆದರೆ, ವರ್ಷಗಟ್ಟಲೆ ಆರ್.ಎಸ್.ಎಸ್. ಕಚೇರಿಯ ಮೇಲೆ ರಾಷ್ಟ್ರಧ್ವಜ ಹಾರಿಸಿರಲಿಲ್ಲ ಎಂದು ಶಿವಕುಮಾರ್ ಹೇಳಿದ್ದಾರೆ.

# ಸನ್ಮಾನ ಶಿಕ್ಷಕರಿಗೆ ಬಹುಮಾನ



ದಾವಣಗೆರೆ, ಜು. 17 - ಶಿಕ್ಷಕನಾದವನಿಗೆ ಸಮಾಜ ಅವನ ಸೇವೆಯನ್ನು ಗುರುತಿಸಿ ಸನ್ಮಾನಿಸಿದರೆ ಅದರಷ್ಟು ಹೆಮ್ಮೆ ತರುವ ವಿಚಾರ ಇನ್ನೊಂದಿಲ್ಲ. ಸನ್ಮಾನ ಎಂಬುದು ಶಿಕ್ಷಕರ ಪಾಲಿಗೆ ದೊಡ್ಡ ಬಹುಮಾನದಂತೆ ಎಂದು ಶಾಮನೂರು ಸರ್ಕಾರಿ ಸಂಯುಕ್ತ ಪ್ರೌಢಶಾಲೆ ಮುಖ್ಯಶಿಕ್ಷಕ ದೇವೇಂದ್ರಪ್ಪ ಹೇಳಿದರು.

ದಾವಣಗೆರೆ ಜಿಲ್ಲಾ ಸಂಸ್ಕಾರ ಭಾರತಿ ವತಿಯಿಂದ ಗುರುಪೂರ್ಣಿಮೆ ಅಂಗವಾಗಿ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಶಿಕ್ಷಕರನ್ನು ಗೌರವಿಸಿದರೆ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರೋತ್ಸಾಹದಾಯಕವಾಗುತ್ತದೆ. ತನ್ನನ್ನು ಪ್ರೀತಿಸುವ ವ್ಯಕ್ತಿಗಳಿದ್ದಾರೆ ಎಂದರೆ ಶಿಕ್ಷಕರಿಗೆ ನವಚೈತನ್ಯ ಮೂಡುತ್ತದೆ. ಅಕ್ಷರ ಜ್ಞಾನ, ಮೌಲ್ಯಗಳನ್ನು ನೀಡಿದ ಶಿಕ್ಷಕರನ್ನು ಗೌರವಿಸಿ, ಪ್ರೀತಿಸಿ, ಆನಂದಿಸಿ ಎಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಕಾರ ಭಾರತಿ ಜಿಲ್ಲಾಧ್ಯಕ್ಷ ಎ. ಮಹಾಲಿಂಗಪ್ಪ ಮಾತನಾಡಿ, ಸಂಸ್ಕಾರ ಭಾರತಿಯ ವರ್ಷದ ಮೊದಲ ಕಾರ್ಯಕ್ರಮ ಇದಾಗಿದ್ದು, ನಮ್ಮ ಸಂಸ್ಕೃತಿ, ಸಂಸ್ಕಾರಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸವನ್ನು ಸಂಸ್ಕಾರ ಭಾರತಿ ಮಾಡುತ್ತಿದೆ. ಎಲೆಮರೆ ಕಾಯಿಗಳ ಜೊತೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕ್ಷೇತ್ರಗಳಲ್ಲಿರುವ ಸಾಧಕರನ್ನು ಗುರ್ತಿಸಿ ಗೌರವಿಸಲಾಗುವುದು ಎಂದು ತಿಳಿಸಿದರು.

ವೇದಿಕೆಯಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ನಾಗರಾಜಪ್ಪ, ಸಂಸ್ಕಾರ ಭಾರತಿ ಜಿಲ್ಲಾ ಖಜಾಂಚಿ ಬಿ. ದಿಳ್ಯಪ್ಪ, ಮಹಿಳಾ ಕಾರ್ಯದರ್ಶಿ ದೇವಿಕ ಸುನೀಲ್, ಸಾಹಿತ್ಯ (5ನೇ ಪುಟಕ್ಕೆ)

# ರಾಷ್ಟ್ರಪತಿ ಚುನಾವಣೆ : ಸರ್ಕಾರಿ ಪ್ರ.ದ. ಕಾಲೇಜಿನಲ್ಲಿ ರಸಪ್ರಶ್ನೆ ಕಾರ್ಯಕ್ರಮ



ದಾವಣಗೆರೆ, ಜು. 17- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಚೆಗೆ ರಾಷ್ಟ್ರಪತಿಗಳ ಚುನಾವಣೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮತದಾರರ ಸಾಕ್ಷರತಾ ವೇದಿಕೆಯ ಕಾರ್ಯಕ್ರಮಾಧಿಕಾರಿ ಡಾ. ಸಿ.ಎಸ್. ಸೋಮಶೇಖರಪ್ಪ, ಪ್ರೊ,ಚನ್ನಬಸಪ್ಪ, ಪ್ರೊ, ಶಂಭುಲಿಂಗಪ್ಪ ನಲ್ಲನವರ, ಉಪನ್ಯಾಸಕ ರಾಮಸ್ವಾಮಿ ಉಪಸ್ಥಿತರಿದ್ದರು.

# ಹರಪನಹಳ್ಳಿ: ಖಾತ್ರಿ ಕೂಲಿಗಾಗಿ ಪ್ರತಿಭಟನೆ



ಹರಪನಹಳ್ಳಿ, ಜು.17 - ಉದ್ಯೋಗ ಖಾತರಿಯಲ್ಲಿ ಕೆಲಸ ನಿರ್ವಹಿಸಿದ ಕೂಲಿ ಕಾರ್ಮಿಕರಿಗೆ ಸಮರ್ಪಕವಾದ ಕೂಲಿಯನ್ನು ಪಾವತಿಸಿಲ್ಲ ಎಂದು ಆರೋಪಿಸಿ ತಾಲ್ಲೂಕಿನ ಅಲಮರಸಿಕೇರಿ ಗ್ರಾಮದ ಕೂಲಿ ಕಾರ್ಮಿಕರು ತೊಗರಿಕಟ್ಟೆ ಗ್ರಾಪಂ ಎದುರು ಪ್ರತಿಭಟನೆ ನಡೆಸಿದರು.

ಅಲಮರಸಿಕೇರಿ ಗ್ರಾಮದ 100ಕ್ಕೂ ಹೆಚ್ಚು ಕೂಲಿಕಾರ್ಮಿಕರು ಗೋಕಟ್ಟೆ ಕೆಲಸವನ್ನು ನಿರ್ವಹಿಸಿದ್ದು, ಒಂದು ವಾರ ಕೆಲಸ ಮಾಡಿದರೂ ಕೂಲಿ ಮೊತ್ತವನ್ನು ಪಾವತಿಸಿರುವುದಿಲ್ಲ ಎಂದು ಗ್ರಾಪಂ ಅಧ್ಯಕ್ಷರಿಗೆ ತಮ್ಮ ಅಳಲನ್ನು ತೋಡಿಕೊಂಡರು. ಕೂಡಲೇ ಕೆಲಸ ನಿರ್ವಹಿಸಿದ ಕೂಲಿ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ಪಾವತಿ ಮಾಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಆನಂದ್ ಕೂಲಿಕಾರ್ಮಿಕರ ಸಮಸ್ಯೆ ಆಲಿಸಿ, ಕೂಡಲೇ ಸರಿಪಡಿಸುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಹೆಚ್.ಚಂದ್ರಪ್ಪ, ಮಾಗಳ ರವಿ, ಓಮಪ್ಪ, ಹಾಲಪ್ಪ, ನಾಗಪ್ಪ, ಜೆ.ಬಸವರಾಜ್, ಪಿ.ಕೋಟೆಪ್ಪ, ಡಿ.ಅಂಜಿನಪ್ಪ, ಶೋಭ, ಪಿ.ರೇಣುಕಮ್ಮ, ಚಂದ್ರಮ್ಮ, ಹೊನ್ನಪ್ಪ ಇತರರಿದ್ದರು.

# ದಿನಬಳಕೆ ವಸ್ತುಗಳಿಗೆ ಶೇ.5ರಷ್ಟು ಜಿಎಸ್‌ಟಿ

**(1ನೇ ಪುಟದಿಂದ)** ಜಾರಿಗೆ ಬಂದಿದೆ. ರಸ್ತೆ, ಸೇತುವೆ, ರೈಲ್ವೆ ಸೇರಿದಂತೆ ಹಲವು ಕಾಮಗಾರಿಗಳ ಮೇಲಿನ ಜಿ.ಎಸ್.ಟಿ.ಯನ್ನು ಶೇ.12ರಿಂದ ಶೇ.18ಕ್ಕೆ ಹೆಚ್ಚಿಸಲಾಗಿದೆ.

# ಬಡತನ ಶಾಪವಲ್ಲ, ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆ ಅಲಂಕರಿಸಿ : ಶಾಸಕ ರಾಮಚಂದ್ರ



## ಜಗಳೂರು: ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಜಗಳೂರು, ಜು.17 - ದಲಿತ ಕುಟುಂಬಗಳಿಗೆ ಬಡತನ ಶಾಪವಲ್ಲ. ಸರ್ಕಾರದ ಸೌಲಭ್ಯ ಪಡೆದು ಐಎಎಸ್‌ಐ, ಐಪಿಎಸ್ ನಂತಹ ಉನ್ನತ ಹುದ್ದೆ

ಅಲಂಕರಿಸಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಶಾಸಕ ಎಸ್.ವಿ. ರಾಮಚಂದ್ರ ಕಿವಿಮಾತು ಹೇಳಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಆದಿಜಾಂಬವ ಮಾದಿಗ ಸಮಾಜದ ವತಿಯಿಂದ ಎಸ್ ಎಸ್ ಎಲ್ ಮತ್ತು ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಾದ್ಯಂತ 124 ಕ್ಕೂ ಅಧಿಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇಂದು ಪುರಸ್ಕಾರಿಸಲಾಗಿದೆ. ಆದಿಜಾಂಬವ ಸಮಾಜದ ವಿದ್ಯಾರ್ಥಿಗಳಿಗೆ ಉತ್ತೇಜನಗೊಂಡು ಭವಿಷ್ಯ ಉಜ್ವಲವಾಗಲಿ. ಪ್ರತಿಭೆಗಳು ತಾಲ್ಲೂಕಿಗೆ ಕೀರ್ತಿ ತರಲಿ ಎಂದು ಶುಭ ಕೋರಿದರು.

**ಹೊನಲು ಬೆಳಕಿನ ಕಬಡ್ಡಿ :** ಮುಂಬರುವ ಡಿಸೆಂಬರ್ ಮಾಹೆ ಒಳಗಾಗಿ 57 ಕೆರೆಗಳಿಗೆ ನೀರು ಭರ್ತಿಯಾಗಲಿದ್ದು, ಸಂತಸಕ್ಕಾಗಿ ರಾಜ್ಯಮಟ್ಟದ ಹೊನಲುಬೆಳಕಿನ ಕಬ್ಬಡ್ಡಿ ಕ್ರೀಡೆಯನ್ನು ಡಿಸೆಂಬರ್ ತಿಂಗಳಲ್ಲಿ ಆಯೋಜಿಸಲಾಗುವುದು ಎಂದರು.

ಹಿರಿಯೂರಿನ ಆದಿಜಾಂಬವ ಪೀಠದ ಷಡಕ್ಷರ ಮುನಿ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಮಾದಿಗ ಸಮಾಜ ತಾಲ್ಲೂಕಿನಲ್ಲಿ 40 ಸಾವಿರ ಜನಸಂಖ್ಯೆಯಿದ್ದು, ಚುನಾವಣೆ ಸಂದರ್ಭದಲ್ಲಿ ಕೇವಲ ಮತ ಬ್ಯಾಂಕಿಗೆ ಸೀಮಿತವಾಗದೆ ಒಗ್ಗಟ್ಟಿನಿಂದ ಸಮಾಜದ ಶಕ್ತಿ ಪ್ರದರ್ಶನ ಮಾಡಿದರೆ ಮಾತ್ರ ರಾಜಕಾರಣದಲ್ಲಿ ಸೂಕ್ತ ಸ್ಥಾನಮಾನಗಳನ್ನು ಪಡೆಯಲು ಸಾಧ್ಯ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಅಂದಿನ ಸಂದರ್ಭದಲ್ಲಿ ಸಂಕಷ್ಟದ ಮಧ್ಯೆ ಶಿಕ್ಷಣ ಪಡೆದ ಫಲವಾಗಿ ದೇಶಕ್ಕೆ ಸಂವಿಧಾನ ರಚನೆಯಾಯಿತು. ಅವರು ಆದರ್ಶವಾಗಿ ಮಾದಿಗ ಸಮಾಜದ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಹಂಬಲಿಸುತ್ತಿರಬೇಕು. ಉನ್ನತ ಶಿಕ್ಷಣ ಪಡೆಯುವ ಜೊತೆಗೆ ಶಿಸ್ತು, ಸಂಯಮ ಮೈಗೂಡಿಸಿಕೊಂಡು ಇತರೆ ಸಮುದಾಯಗಳಿಗೆ ಮಾದರಿಯಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಆದಿ ಜಾಂಬವ ಸಮಾಜದ ಕಾರ್ಯದರ್ಶಿ ಚಂದ್ರಪ್ಪ, ದಲಿತ ಮುಖಂಡರಾದ ಶಂಭುಲಿಂಗಪ್ಪ, ತಿಪ್ಪೇಸ್ವಾಮಿ, ಓಬಣ್ಣ, ಪೂಜಾರ ಸಿದ್ದಪ್ಪ, ಪತ್ರಕರ್ತ ರಾಜಪ್ಪ ವ್ಯಾಸಗೊಂಡನಹಳ್ಳಿ, ಪಲ್ಲಾಗಟ್ಟೆ ಎಚ್.ಸಿ. ಮಹೇಶ್, ಹಟ್ಟಿ ತಿಪ್ಪೇಸ್ವಾಮಿ, ಪ.ಪಂ ಸದಸ್ಯರಾದ ನಿರ್ಮಲ, ದೇವರಾಜ್ ,ಪಾಪಲಿಂಗಪ್ಪ, ಮುಖಂಡರಾದ ರಮೇಶ್, ಶಿವಕುಮಾರ್, ವಕೀಲ ಹನುಮಂತಪ್ಪ, ಸತೀಶ್, ಕುಬೇಂದ್ರಪ್ಪ,ಗ್ರಾ.ಪಂ ಅಧ್ಯಕ್ಷರಾದ ಬಸವರಾಜ್, ಶೃತಿ, ಸೇರಿದಂತೆ ವಿವಿದ ಗ್ರಾಮ ಪಂಚಾಯಿತಿ ಸದಸ್ಯರುಗಳು ಭಾಗವಹಿಸಿದ್ದರು.

# ಮೌಲಾನಾ ಆಜಾದ್ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ



ದಾವಣಗೆರೆ, ಜು. 17 - ಮೌಲಾನಾ ಆಜಾದ್ ಶಿಕ್ಷಣ ಮತ್ತು ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಮುರುಘಾಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರ 30ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವದ ಪ್ರಯುಕ್ತ ಮಿಲ್ಲತ್ ಪ್ರೌಢಶಾಲೆಯ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಬುಕ್, ಪೆನ್ನುಗಳು ಹಾಗೂ ಸಿಹಿಯನ್ನು ಶ್ರೀ ಶಿವಮೂರ್ತಿ ಮುರುಘಾ ಶರಣರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷ ನಸೀರ್ ಅಹ್ಮದ್ ಅಧ್ಯಕ್ಷತೆಯಲ್ಲಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಬಸವಪ್ರಭು ಸ್ವಾಮೀಜಿ, ಮಿಲ್ಲತ್ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಸೈಯದ್ ಸೈಫುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

# ಹರಿಹರ ಕಾಂಗ್ರೆಸ್ ಟಿಕೆಟ್ ಈ ಬಾರಿ ನನಗೆ ಸಿಗಲಿದೆ

## ಡಾ. ದೀಟೂರು ಮಹೇಶ್ವರಪ್ಪ ವಿಶ್ವಾಸ



ಹರಿಹರ, ಜು.17- ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಸಾಕಷ್ಟು ಕೆಲಸವನ್ನು ಮಾಡಿದ್ದರೂ ಸಹ ಕಳೆದ 2018 ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಟಿಕೆಟ್ ನನಗೆ ಕೈ ತಪ್ಪಿತು ಎಂದು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಡಾ. ದೀಟೂರು ಮಹೇಶ್ವರಪ್ಪ ತಿಳಿಸಿದರು.

ಈ ಬಾರಿ ನನಗೆ ಹರಿಹರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ದೊರೆಯುತ್ತದೆ ಎಂಬ ಸಂಪೂರ್ಣ ನಂಬಿಕೆ ಇರುವುದರಿಂದ ಕ್ಷೇತ್ರದ ಮನೆಗಳಿಗೆ ಭೇಟಿ ಕೊಟ್ಟು ಮತದಾರರ ಮನವೊಲಿಸಲು ಮುಂದಾಗಿರುವುದಾಗಿ ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ತಿಳಿಸಿದರು.

ಹರಿಹರ ತಾಲ್ಲೂಕು ದೀಟೂರು ಗ್ರಾಮದಲ್ಲಿ ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿರುವ ನಾನು, ದಾವಣಗೆರೆ ಬಿಐಇಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕ ವೃತ್ತಿ ಆರಂಭಿಸಿ, ಬೆಳಗಾವಿ ವಿ.ಟಿ.ಯು ವಿಶೇಷಾಧಿಕಾರಿ ಮತ್ತು ಬೆಂಗಳೂರಿನಲ್ಲಿ ಕುಲಪತಿಗಳಾಗಿ ಕೆಲಸ ಮಾಡಿದ್ದೇನೆ ಎಂದರು.

ಕಾಂಗ್ರೆಸ್ ಪಕ್ಷದ ಮಾಜಿ ವಕ್ತಾರ ಎಂ.ಬಿ. ಅಣ್ಣಪ್ಪ ಮಾತನಾಡಿ, ಹಿಂದಿನ ಚುನಾವಣೆ ಸಮಯದಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿತರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆದರೆ ಪಕ್ಷ ರಾಮಪ್ಪನವರಿಗೆ ಟಿಕೆಟ್ ನೀಡಿದ್ದರಿಂದ ಎಲ್ಲರೂ ಒಗ್ಗಟ್ಟಿನಿಂದ ದುಡಿದು ಗೆಲ್ಲುವುದಕ್ಕೆ ಶ್ರಮಿಸಿದರು ಎಂದರು.

ಈ ಸಂದರ್ಭದಲ್ಲಿ ತಿಪ್ಪೇರುದ್ರರೆಡ್ಡಿ, ಸಮಿವುಲ್ಲಾ, ರಜಾಕ್, ಮಹಮ್ಮದ್ ಎಕ್ಬಾಲ್, ಅಬ್ದುಲ್ಲಾ, ಪಿ. ಪ್ರಕಾಶ್, ರಾಜಮಣಿ, ಶ್ಯಾಮಸನ್ ಮೇಸ್ತ್ರಿ, ಬಂಡಿ ನಾಗರಾಜ್, ಬಸಣ್ಣ, ಅವಿತ್ ರಾಜಣ್ಣ ಇತರರಿದ್ದರು.

# ಮಾರ್ಗರೇಟ್ ಆಳ್ವ

**(1ನೇ ಪುಟದಿಂದ)** ಆಯ್ಕೆ ಮಾಡಲಾಗಿದೆ.

ಎರಡು ಗಂಟೆ ಕಾಲ ನಡೆದ ಸಭೆಯ ನಂತರ ಮಾತನಾಡಿದ ಪವಾರ್, ಆಳ್ವ ಅವರನ್ನು ಜಂಟಿ ಅಭ್ಯರ್ಥಿಯಾಗಿ ಕಣಕ್ಕಿಳಿಸಲು ಸರ್ವಸಮ್ಮತಿಯಿಂದ ತೀರ್ಮಾನಿಸಲಾಗಿದೆ ಎಂದಿದ್ದಾರೆ.

# 200 ಕೋಟಿ ದಾಟಿದ ಲಸಿಕೆ

ನವದೆಹಲಿ, ಜು. 17 – ದೇಶದಲ್ಲಿ ನೀಡಲಾದ ಕೊರೊನಾ ಲಸಿಕೆಯ ಸಂಖ್ಯೆ ಭಾನುವಾರ 200 ಕೋಟಿಯ ಗಡಿ ದಾಟಿದೆ.

ಈ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೊರೊನಾ ವಿರುದ್ಧದ ಹೋರಾಟ ಲಸಿಕೆಯಿಂದ ಬಲವಾಗಿದೆ ಎಂದಿದ್ದಾರೆ.

ಆರೋಗ್ಯ ಇಲಾಖೆಯ ಮಾಹಿತಿಯ ಪ್ರಕಾರ ದೇಶದ ಶೇ.98ರಷ್ಟು ವಯಸ್ಕರು ಮೊದಲ ಡೋಸ್ ಹಾಗೂ ಶೇ.90ರಷ್ಟು ಜನರು ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ.

15-48ರ ವಯೋಮಾನದ ಶೇ.82ರಷ್ಟು ಹದಿಹರೆಯದವರು ಮೊದಲ ಡೋಸ್ ಹಾಗೂ ಶೇ.68ರಷ್ಟು ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ.

12-14ರ ಹರೆಯದ ಶೇ.81ರಷ್ಟು ಮಕ್ಕಳು ಮೊದಲ ಹಾಗೂ ಶೇ.56ರಷ್ಟು ಮಕ್ಕಳು ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ.

ಆಂಧ್ರ ಪ್ರದೇಶ, ಅಂಡಮಾನ್ ಮತ್ತು ನಿಕೋಬಾರ್, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಲಕ್ಷದ್ವೀಪ, ಚಂಡೀಘಡ, ತೆಲಂಗಾಣ ಹಾಗೂ ಗೋವಾಗಳು 12 ವರ್ಷದ ಮೇಲಿನ ಎಲ್ಲರಿಗೂ ಶೇ.100ರಷ್ಟು ಲಸಿಕೆ ನೀಡಿವೆ.

# ಬಾಡದಲ್ಲಿ ಇಂದು 'ಹಳ್ಳಿ ಕಾರ್ಯಕ್ರಮ'

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ರೈತರ ಕಷ್ಟ ನಷ್ಟಗಳಿಗೆ ಸ್ಪಂದಿಸಲು ಹಾಗೂ ಸರ್ಕಾರಿ ಸೌಲಭ್ಯಗಳನ್ನು ವಿವರಿಸಲು 'ಹಳ್ಳಿ ಕಾರ್ಯಕ್ರಮ' ಆಯೋಜಿಸಿದೆ.

ಪ್ರಥಮ ಕಾರ್ಯಕ್ರಮವು ಇಂದು ಮಧ್ಯಾಹ್ನ 12.30ಕ್ಕೆ ತಾಲ್ಲೂಕಿನ ಬಾಡ ಗ್ರಾಮದಲ್ಲಿ ನಡೆಯಲಿದ್ದು, ರೈತರು ತಮ್ಮ ಯಾವುದೇ ಅಹವಾಲುಗಳು ಇದ್ದರೆ ಬರವಣಿಗೆ ಮೂಲಕ ಅರ್ಜಿ ನೀಡಬಹುದು ಎಂದು ಜಿಲ್ಲಾ ಕಾರ್ಯದರ್ಶಿ ಅಣಬೇರು ಕುಮಾರಸ್ವಾಮಿ ಕೋರಿದ್ದಾರೆ.

# ಗಂಗಾನಗರ, ಬೆಂಕಿನಗರ ನಿವಾಸಿಗಳಿಗೆ ಶಾಶ್ವತ ವ್ಯವಸ್ಥೆ



**(1ನೇ ಪುಟದಿಂದ)** ಹಳ್ಳಿ, ವಾಸನ ರಸ್ತೆಗಳ ವಿಚಾರಕ್ಕೆ ಸಂಬಂಧಿಸಿದಂತೆ ಇಲಾಖೆಯ ಅಧಿಕಾರಿಗಳ ಜೊತೆಗೆ ಮಾತನಾಡುವುದಾಗಿ ಅವರು ಹೇಳಿದರು.

ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಮಾತನಾಡಿ, ಗಂಗಾನಗರ ನಗರದಲ್ಲಿ ನೀರು ನುಗ್ಗುವ ಮನೆಗಳನ್ನು ಗುರುತಿಸಿ, ಅವರಿಗೆ ಶಾಶ್ವತ ವ್ಯವಸ್ಥೆ ಕಲ್ಪಿಸಲು ನೀಲನಕ್ಷೆ ರೂಪಿಸಲಾಗುವುದು ಎಂದು ಹೇಳಿದರು.

ಪೌರಾಯುಕ್ತ ಐಗೂರು ಬಸವರಾಜ್ ಮಾತನಾಡಿ, ನಗರಸಭೆಯಿಂದ ಮನೆಗಳನ್ನು ನೀಡುವಾಗ ಗಂಗಾನಗರ ನಿವಾಸಿಗಳ ಕುಟುಂಬದ ಸದಸ್ಯರಿಗೆ ಆದ್ಯತೆ ನೀಡಲಾಗುವುದು ಎಂದರು.

ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್ ಮಾತನಾಡಿ, ತೆಗ್ಗಿನಕೇರಿ, ಹಳೆ ಭರಂಪುರ, ಕೋಟೆ ಬಡಾವಣೆ ಈ ಭಾಗದಲ್ಲೂ ಸಹ ನದಿಯ ನೀರು ಹೆಚ್ಚಾಗಿ ಹರಿಯುವುದರಿಂದ ಈ ಭಾಗದವರಿಗೂ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದರು.

ಡಿಎಸ್‌ಎಸ್ ಸಂಘಟನೆ ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿ, ತಾಲ್ಲೂಕಿನ ಕಡರ ನಾಯಕನಹಳ್ಳಿ ಮತ್ತು ವಾಸನ ರಸ್ತೆಯ ಸಮಸ್ಯೆ ಬಹುದಿನಗಳ ಕಾಲ ಇದ್ದು ಆ ರಸ್ತೆ ದುರಸ್ತಿ ಪಡಿಸಲು ಹಾಗೂ ಹಾಸ್ಟೆಲ್‌ನಲ್ಲಿ ಮಕ್ಕಳಿಗೆ ಅಲ್ಲಿನ ಸಿಬ್ಬಂದಿಗಳು ಬಹಳ ಕಿರುಕುಳ ನೀಡುತ್ತಿದ್ದಾರೆ. ಅವರನ್ನು ತಹಬಂದಿಗೆ ತರುವಂತೆ ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಆಡಳಿತದ ವಿ.ಎ. ಸಮೀರ್, ದೇವರಾಜ್ ಇತರರು ಹಾಜರಿದ್ದರು


ಮಾನ್ಯ ಗೌರವಾನ್ವಿತ 3ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ದಾವಣಗೆರೆ.
ಸಿ.ಆರ್.ಮಿಸ್. ನಂ: 52/2022

**ಅರ್ಜಿದಾರರು: 1)** ಶ್ರೀ ಗೌಡ್ರ ಮಹಾದೇವಪ್ಪ ಬಿನ್ ಲೇಟ್ ಗೌಡ್ರ ಶಿವರುದ್ರಪ್ಪ, ವಯಸ್ಸು 63 ವರ್ಷ. **2)** ಶ್ರೀಮತಿ ಗೌರಮ್ಮ ಬಿನ್ ಲೇಟ್ ಗೌಡ್ರ ಶಿವರುದ್ರಪ್ಪ, ವಯಸ್ಸು 68ವರ್ಷ. **3)** ಶ್ರೀಮತಿ ಲಲಿತಮ್ಮ ಬಿನ್ ಲೇಟ್ ಗೌಡ್ರ ಶಿವರುದ್ರಪ್ಪ, ವಯಸ್ಸು 59ವರ್ಷ. **4)** ಶ್ರೀಮತಿ ಇಂದ್ರಮ್ಮ ಬಿನ್ ಲೇಟ್ ಗೌಡ್ರ ಶಿವರುದ್ರಪ್ಪ, ವಯಸ್ಸು 56ವರ್ಷ. **5)** ಶಿವನಗೌಡ ಬಿನ್ ಗೌಡ್ರ ಮಹಾದೇವಪ್ಪ, ವಯಸ್ಸು 29ವರ್ಷ **ಎಲ್ಲಾರ ವಾಸ:** ಕಂದಗಲ್ಲು ಗ್ರಾಮ, ದಾವಣಗೆರೆ ತಾ ಮತ್ತು ಜಿ. **: ವಿರುದ್ಧ :** **ಎದುರುದಾರರು:** ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಮಹಾನಗರ ಪಾಲಿಕೆ ದಾವಣಗೆರೆ.

**ಸಾರ್ವಜನಿಕ ನೋಟೀಸು**

ಮೇಲ್ಕಂಡ ಪ್ರಕರಣವನ್ನು 1 ರಿಂದ 4ನೇ ಅರ್ಜಿದಾರರ ತಂದೆ **ಶ್ರೀ ಗೌಡ್ರ ಶಿವರುದ್ರಪ್ಪ ಬಿನ್ ಲೇಟ್ ಚನ್ನಬಸಪ್ಪ** ಇವರು ದಿ:25–10–1985ರಂದು, ಬೆಳವನೂರು ಗ್ರಾಮ, ದಾವಣಗೆರೆ ತಾ ಮತ್ತು ಜಿಲ್ಲೆಯ ಸ್ವಗ್ರಾಮದ ಮನೆಯಲ್ಲಿ ವಯೋಮರಣ ಹೊಂದಿರುವ ಅಂಶವನ್ನು ಎದುರುದಾರರು ನೊಂದಾಯಿಸಿ ಕೊಂಡು ಮರಣ ಸಮರ್ಥ ಪತ್ರವನ್ನು ನೀಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿದಾರರ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ನೊಂದಾಯಿಸಿಕೊಂಡು ಪ್ರಕರಣವನ್ನು **ದಿ:26–08–2022** ರಂದು ಬೆಳಗ್ಗೆ 11.00 ಗಂಟೆಗೆ ವಿಚಾರಣೆಗೆ ನಿಗದಿ ಪಡಿಸಿದ್ದು, ಅರ್ಜಿದಾರರ ಅರ್ಜಿಗೆ ಯಾರಾದರೂ ತಕರಾರು ಇದ್ದಲ್ಲಿ ತಾವಾಗಲೀ ತಮ್ಮ ಪರ ವಕೀಲರ ಮುಖಾಂತರವಾಗಲೀ ನಿಗದಿತ ದಿನಾಂಕ ಸಮಯದಂದು ಮೇಲ್ಕಂಡ ನ್ಯಾಯಾಲಯದಲ್ಲಿ ತಮ್ಮ ಅಹವಾಲು ಸಲ್ಲಿಸಬಹುದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಅಪ್ಪಣೆಯ ಮೇರೆಗೆ **ದಿ:16–07–2022** ರಂದು ನೀಡಲಾಗಿದೆ.

**ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೇದಾರರು**
**3ನೇ ಹೆಚ್ಚುವರಿ ಸಿವಿಲ್&ಜೆ.ಎಮ್.ಎಫ್.ಸಿ. ನ್ಯಾಯಾಲಯ, ದಾವಣಗೆರೆ.**
**ಅರ್ಜಿದಾರರ ಪರ ವಕೀಲರು**
**ಶ್ರೀ ಅರುಣ್ ಕುಮಾರ್ ಎಂ.**


# ಸಮಾಜಕ್ಕೆ ಸ್ಪಂದಿಸಿದವರು ಸದಾ ಸ್ಮರಣೀಯರಾಗಿರುತ್ತಾರೆ: ಬಸವಪ್ರಭು ಶ್ರೀ



ದಾವಣಗೆರೆ, ಜು.17- ಸಮಾಜಮುಖಿಯಾಗಿ ಸ್ಪಂದಿಸಿದವರು ಸದಾ ಸ್ಮರಣೀಯರಾಗಿ ರುತ್ತಾರೆ, ಯಾವತ್ತೂ ಜನಮಾನಸದಿಂದ ಅವರು ಮರೆಯಾಗುವುದಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ಜೀವನದಲ್ಲಿ ಸಂಪಾದನೆಯ ಸ್ವಲ್ಪ ಅಂಶವನ್ನಾದರೂ ಸಮಾಜಕ್ಕಾಗಿ ಸಮರ್ಪಿಸಬೇಕು ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ಲಿಂಗೈಕ್ಯ ಹರಳೆಣ್ಣೆ ಕೊಟ್ರೂರ ಬಸವಪ್ಪ ಎಜುಕೇಷನ್ ಅಂಡ್ ಚಾರಿಟಬಲ್ ಟ್ರಸ್ಟ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ನಿನ್ನೆ ಏರ್ಪಾಡಾಗಿದ್ದ 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್ ಮಾತನಾಡಿ, ಸಾಧನ ಸವಲತ್ತುಗಳು ಇಲ್ಲದ ಕಾಲದಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಷ್ಟೇ ಅಲ್ಲ, ಸಮಾಜವನ್ನೂ ಕಟ್ಟುವ ಕೆಲಸವನ್ನೂ ಹಿಂದಿನ ತಲೆಮಾರಿನವರು ಮಾಡಿದರು.ಇದು ಇಂದಿನ ಯುವ ಪೀಳಿಗೆಗೆ ಸ್ಫೂರ್ತಿಯಾಗ ಬೇಕು. ವಿದ್ಯಾರ್ಥಿ ಸಮುದಾಯವು ಉದ್ಯೋಗಿ ಗಳಾಗಲು ಬಯಸುತ್ತಿದ್ದಾರೆಯೇ ವಿನಃ ಉದ್ಯೋಗದಾತರಾಗಲು ಮುಂದೆ ಬರುತ್ತಿಲ್ಲ. ಹರಳೆಣ್ಣೆ ಕೊಟ್ರೂರು ಬಸವಪ್ಪನವರಂತ ಅನೇಕ ವ್ಯಕ್ತಿಗಳು ಸವಾಲುಗಳನ್ನು ಎದುರಿಸಿ ತಾವು ನೆಲೆನಿಂತದ್ದಷ್ಟೇ ಅಲ್ಲ, ಸಮಾಜದಲ್ಲಿ ಇತರರೂ ನೆಲೆ ನಿಲ್ಲುವಲ್ಲಿ ಸ್ಪಂದಿಸಿದರು. ಪುರಸ್ಕಾರವಾಗಲೀ, ದಾನವಾಗಲೀ ಪಡೆದವರು ಮುಂದೆ ಸಂಪಾದನೆ ಸ್ಥಿತಿಗೆ ಬಂದಾಗ ಕಿಂಚಿತ್ತಾದರೂ ದಾನ ಮಾಡುವ ಮೂಲಕ ಸಮಾಜಕ್ಕೆ ಕೊಡುವ ಮೂಲಕ ಋಣಮುಕ್ತರಾಗಬೇಕು. ಅಂತಃಕರಣದ ಪೂರ್ವಕ ಆತಿಥ್ಯದಿಂದ ಮಾತೃ ಋಣವನ್ನೂ, ಸಂಪಾದನೆಯ ಸದ್ವಿನಿಯೋಗದ ಮೂಲಕ ಪಿತೃಋಣವನ್ನೂ, ಸದ್ವಿದ್ಯೆಯ ಸದುಪಯೋಗದ ಮೂಲಕ ಗುರು ಋಣವನ್ನೂ, ದಾನ ಸಮರ್ಪಣೆಯ ಮೂಲಕ ಸಮಾಜವನ್ನೂ ತೀರಿಸಲು ಸಾಧ್ಯ ಎಂದು ಎಚ್.ಬಿ.ಮಂಜುನಾಥ್‌ರವರು ಹರಳೆಣ್ಣೆ ಕೊಟ್ರು ಬಸಪ್ಪನವರ ಕುಟುಂಬ ವರ್ಗದವರು ಪ್ರತಿಭಾ ಪುರಸ್ಕಾರ ಮೂಲಕ ಸಮಾಜಕ್ಕೆ ಸಮರ್ಪಿಸುತ್ತಿರುವುದು ಅನುಕರಣೀಯ ಎಂದರು.

ಕನ್ನಡ ಉಪನ್ಯಾಸಕ ಜಂಬಗಿ ಮೃತ್ಯುಂಜಯ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು, ಚಿತ್ರಕಿ ಶಿವಕುಮಾರ್ ಪ್ರಾರ್ಥನಾ ವಚನ ಹಾಡಿದರು, ದಿವ್ಯಾ ಹಾಗೂ ವಿಭಾ ರವರು ನಿರೂಪಿಸಿದ ಕಾರ್ಯಕ್ರಮದಲ್ಲಿ ಶ್ರೀಮತಿ ನೀಲಾಂಬಿಕ ಜಂಬಿಗಿ ಶರಣಪ್ಪ ಅವರು ಅಧ್ಯಕ್ಷೀಯ ನುಡಿಗಳನ್ನಾಡಿದರು. ಟ್ರಸ್ಟ್‌ನ ಹೆಚ್.ಕೆ. ಮಂಜುನಾಥ್, ಶ್ರೀಮತಿ ನಾಗರತ್ನ ಮಂಜುನಾಥ್, ಸುಮಂತ್, ಶ್ರೀಮತಿ ಮಂಜುಳ ಚಂದ್ರಶೇಖರ್, ಜಂಬಿಗಿ ಗಿರೀಶ್, ಸೂರಜ್ ಹೆಚ್.ಸಿ. ಮತ್ತಿತರರು ಭಾಗವಹಿಸಿದ್ದರು.

# ಉತ್ತಮ ಆದರ್ಶಗಳಿಂದ ಶಿಕ್ಷಕರ ಋಣ ತೀರಿಸಬೇಕು



### ಕುರ್ಕಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿನ ಗುರು ವಂದನೆ - ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕ ಹಾಲೇಶಪ್ಪ ಹಿತ ನುಡಿ

ದಾವಣಗೆರೆ, ಜು. 17 - ಶಾಲೆಗಳಲ್ಲಿನ ಗಂಟೆಗಳ ಸದ್ದು ಹೆಚ್ಚು ಕೇಳುವ ದೇಶವು ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರಲು ಸಾಧ್ಯ. ಶಿಕ್ಷಣವಂತರು ವೇಷಭೂಷಣದ ಬದಲಾಗಿ ಉತ್ತಮ ಆದರ್ಶದಿಂದ ಸಮಾಜದಲ್ಲಿ ಗುರುತಿಸಿಕೊಳ್ಳುವ ಮೂಲಕ ಶಿಕ್ಷಕರ ಋಣವನ್ನು ತೀರಿಸಬೇಕಿದೆ ಎಂದು ನಿವೃತ್ತ ಶಿಕ್ಷಕ ಹಾಲೇಶಪ್ಪ ಕರೆ ನೀಡಿದರು.

ಇಲ್ಲಿಗೆ ಸಮೀಪದ ಕುರ್ಕಿ ಸರ್ಕಾರಿ ಪ್ರೌಢಶಾಲೆಯ 2016-17 ನೇ ಸಾಲಿನ ವಿದ್ಯಾರ್ಥಿಗಳು ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಗುರು ವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ, ಗುರು ವಂದನೆ ಸ್ವೀಕರಿಸಿ ಅವರು ಮಾತನಾಡುತ್ತಾ, ಗುರು - ಶಿಷ್ಯರ ನಡುವೆ ಅವಿನಾಭಾವ ಸಂಬಂಧವಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯ ಆರ್. ಗಣೇಶಚಾರ್ ಮಾತನಾಡಿ, ಶಿಕ್ಷಣದಿಂದ ಮಕ್ಕಳು ವಂಚಿತರಾದಲ್ಲಿ ಅದಕ್ಕಿಂತ ದೊಡ್ಡ ದುರಂತ ಬೇರೊಂದಿಲ್ಲ. ದೇಶದ ಪ್ರಗತಿಗೆ ಶಿಕ್ಷಣವೇ ಆಧಾರ ಸ್ಥಂಭವಾಗಿದ್ದು ಅದನ್ನು ಪಡೆದ ವ್ಯಕ್ತಿಗಳು ದೇಶಕ್ಕಾಗಿ ವಿನಿಯೋಗಿಸಬೇಕು ಅಂದಾಗ ಮಾತ್ರ ಸರ್ಕಾರದ ಉದ್ದೇಶಗಳು ಈಡೇರಲು ಸಾಧ್ಯವೆಂದರು.

ಗುರುವಂದನೆ ಸ್ವೀಕರಿಸಿದ ಮತ್ತೋರ್ವ ಶಿಕ್ಷಕರಾದ ಸಿ.ಜಿ.ಜಗದೀಶ್ ಕೂಲಂಬಿ ಮಾತನಾಡಿ, ಇತ್ತೀಚೆಗೆ ಶಿಕ್ಷಕ ವೃಂದಕ್ಕೆ ಗೌರವ ನೀಡುವ ಗುರು ವಂದನೆ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯುತ್ತಿದ್ದು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಹೆಚ್ಚಿಸಿದೆ. ಜ್ಞಾನದ ಹಸಿವನ್ನು ತೀರಿಸಿ ಬದುಕನ್ನು ರೂಪಿಸುತ್ತಿರುವ ಶಿಕ್ಷಕರ ಸೇವೆ ಅವಿಸ್ಮರಣೀಯ, ಶೈಕ್ಷಣಿಕವಾಗಿ ವಿದ್ಯಾರ್ಥಿಗಳನ್ನು ಪ್ರಬುದ್ಧಗೊಳಿಸಿದ ಶಿಕ್ಷಕರ ಸೇವೆಯನ್ನು ಸ್ಮರಿಸುತ್ತಿರುವ ಕಾರ್ಯಕ್ರಮ ಅರ್ಥಪೂರ್ಣ ಎಂದರು.

ಶಿಕ್ಷಕರಾದ ಶ್ರೀಮತಿ ಎಸ್. ಶೋಭಾ, ಹೆಚ್. ವಿರುಪಾಕ್ಷಿ, ಗುರು ಸ್ಥಾನದ ಮಹತ್ವ ಕುರಿತಂತೆ ಮಾತನಾಡಿದರು. ಶಾಲೆಯ ಶಿಕ್ಷಕರುಗಳಾದ ಎಸ್ ಪಾರ್ವತಮ್ಮ, ಎ. ಆರ್ ರಾಘವೇಂದ್ರ, ಎಸ್‌ಡಿಎಂಸಿ ಅಧ್ಯಕ್ಷ ಓಂಕಾರಪ್ಪ ಅವರುಗಳು ಹಳೆಯ ವಿದ್ಯಾರ್ಥಿಗಳ ಈ ಕಾರ್ಯವನ್ನು ಶ್ಲಾಘಿಸಿದರು.

ಇದೇ ಸಂದರ್ಭದಲ್ಲಿ ಕುರ್ಕಿ ಗ್ರಾಮದವರಾದ ಮಹಲಿಂಗ ಪ್ರಭು, ಜಿಲ್ಲಾ ನ್ಯಾಯಾಲಯದ ನಿವೃತ್ತ ನೌಕರರು ಇವರು ಮಕ್ಕಳಲ್ಲಿ ಕ್ರೀಡಾ ಸ್ಫೂರ್ತಿಯನ್ನು ಹೆಚ್ಚಿಸಲು 10 ಜೊತೆ ಕ್ರೀಡಾ ವಸ್ತ್ರಗಳನ್ನು ದೇಣಿಗೆಯಾಗಿ ನೀಡಿದರು.

ಶಿಕ್ಷಕರಾದ ಶ್ರೀಮತಿ ಎಸ್ ಶಾಂತಕುಮಾರಿ, ಶ್ರೀಮತಿ ಎಂ.ವಿ. ಶಕುಂತಲಾ, ಎಸ್.ಪ್ರಕಾಶ್, ಎಂ.ಎನ್ ನಾಗರಾಜ್ ಗುರು ವಂದನೆ ಸ್ವೀಕರಿಸಿದರು.

ಎಸ್‌ಡಿಎಂಸಿ ಸದಸ್ಯ ಕೆ.ಜೆ ನಾಗರಾಜ್, ಕೆ.ಎಂ. ಅಜ್ಜಯ್ಯ ಹಾಗೂ ದಾನಿಗಳಾದ ಮಹಲಿಂಗ ಪ್ರಭು ಮತ್ತು 2016-17ನೇ ಸಾಲಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಬಿಂದುಶ್ರೀ ಪ್ರಾರ್ಥಿಸಿದರೆ, ಹಳೆ ವಿದ್ಯಾರ್ಥಿನಿಯರಾದ ಸುಪ್ರೀತಾ ಸ್ವಾಗತಿಸಿದರು. ಕೆ.ಎಂ.ಸಿದ್ಧಿಕಾ ಕಾರ್ಯಕ್ರಮ ನಿರೂಪಿಸಿದರೆ, ಸರಸ್ವತಿ ವಂದಿಸಿದರು.

# ಉಕ್ಕಡಗಾತ್ರಿಗೆ ಜಿ.ಪಂ. ಸಿಇಓ ಚನ್ನಪ್ಪ ಭೇಟಿ



ಮಲೇಬೆನ್ನೂರು, ಜು.17 - ಸುಕ್ಷೇತ್ರ ಉಕ್ಕಡಗಾತ್ರಿಗೆ ಇಂದು ಬೆಳಿಗ್ಗೆ ಭೇಟಿ ನೀಡಿದ ಜಿ.ಪಂ. ಸಿಇಓ ಚನ್ನಪ್ಪ ಅವರು ಪ್ರವಾಹ ಪರಿಸ್ಥಿತಿ ಬಗ್ಗೆ ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಅಲ್ಲದೇ ಗ್ರಾಮದಲ್ಲಿ ಕಳೆದ 2-3 ವರ್ಷಗಳಿಂದ ಇದ್ದ ಚರಂಡಿ ನೀರು ಹರಿಯುವ ಜಾಗದ ಸಮಸ್ಯೆಯನ್ನು ಇದೇ ವೇಳೆ ಬಗೆಹರಿಸಿದರು.


ಎ.ಕೆ.ಕಾಲೋನಿಯ ಚರಂಡಿ ನೀರು ಮುಂದೆ ಹೋಗದಂತೆ ತಡೆದಿದ್ದ ಜಮೀನಿನ ಮಾಲೀಕನಿಗೆ ತಿಳಿ ಹೇಳಿ, ಹೊಲದಲ್ಲಿ 3 ಅಡಿ ಕೆಳಗೆ ಪೈಪ್ ಹಾಕಿ ಆ ಮೂಲಕ ಚರಂಡಿ ನೀರು ಮುಂದೆ ಸಾಗುವಂತೆ ಸಿಇಓ ಚನ್ನಪ್ಪ ಅವರು ತಾ.ಪಂ. ಇಓ ಗಂಗಾಧರನ್ ಅವರಿಗೆ ಸೂಚಿಸಿದರು. ನಂತರ ಚನ್ನಪ್ಪ ಅವರು ಶನಿವಾರ ದೇವಸ್ಥಾನದ ಬಳಿ ನದಿ ನೀರಿನಲ್ಲಿ ಪರಮೇಶ್ವರನಾಯ್ಕ ಎಂಬ ಯುವಕ ಕೊಚ್ಚಿ ಹೋಗಿದ್ದ ಸ್ಥಳವನ್ನು ವೀಕ್ಷಿಸಿ, ಹುಡುಕಾಟದ ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡೆದುಕೊಂಡರು.

### ನದಿಯಲ್ಲಿ ಕೊಚ್ಚಿ ಹೋಗಿದ್ದ ಯುವಕನಿಗಾಗಿ ಮುಂದುವರಿದ ಹುಡುಕಾಟ

ತಹಶೀಲ್ದಾರ್ ಡಾ. ಬಿ.ಎಂ.ಅಶ್ವತ್ಥ್, ತಾ.ಪಂ. ಸಹಾಯಕ ನಿರ್ದೇಶಕ ಜಿ. ಸುನೀಲ್, ಅಗ್ನಿ ಶಾಮಕ ದಳದ ಅಧಿಕಾರಿ ಸುಹಾಸ್, ಪಿಎಸ್‌ಐ ರವಿಕುಮಾರ್, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಆನಂದ ತೀರ್ಥ, ಪಿಡಿಓ ಈರಣ್ಣ, ದೇವಸ್ಥಾನದ ಕಾರ್ಯದರ್ಶಿ ಸುರೇಶ್ ಹಾಗೂ ಗ್ರಾ.ಪಂ. ಸದಸ್ಯರು ಈ ವೇಳೆ ಹಾಜರಿದ್ದರು.

**ರಸ್ತೆ ಬಂದ್ :** ಭಾನುವಾರ ಬೆಳಿಗ್ಗೆ ತುಂಗಭದ್ರಾ ನದಿಯಲ್ಲಿ ನೀರಿನ ಮಟ್ಟ ಇಳಿಮುಖವಾಗಿದ್ದರಿಂದ ತುಮಿನಕಟ್ಟೆ - ಉಕ್ಕಡಗಾತ್ರಿ ರಸ್ತೆ ಸಂಚಾರಕ್ಕೆ ಮುಕ್ತವಾಗಿತ್ತು. ಸಂಜೆ ಮತ್ತೆ ನದಿಯಲ್ಲಿ ನೀರಿನ ಹರಿವು ಹೆಚ್ಚಾದ ಮತ್ತೆ ಬಂದ್ ಆಯಿತು. ಪತ್ತೇಪುರ - ಉಕ್ಕಡಗಾತ್ರಿ ಸಂಪರ್ಕ ರಸ್ತೆಯೂ ನದಿ ಹಿನ್ನೀರಿನಲ್ಲಿ ಮುಳುಗಿದೆ.

## ಬಿ.ಕಲಪನಹಳ್ಳಿಯಲ್ಲಿ ಇಂದು ಶರಣ ಬಸಪ್ಪಜ್ಜರ ಪುಣ್ಯಾರಾಧನೆ



ದಾವಣಗೆರೆ ತಾಲ್ಲೂಕಿನ ಬಿ. ಕಲಪನಹಳ್ಳಿಯಲ್ಲಿ ಶರಣ ಬಸಪ್ಪಜ್ಜರ 90ನೇ ಪುಣ್ಯಾರಾಧನೆ ಕಾರ್ಯಕ್ರಮವು ಇಂದು ನಡೆಯಲಿದೆ. ಬೆಳಿಗ್ಗೆ 6 ರಿಂದ ವಚನಾಭಿಷೇಕ ಹಾಗೂ ಮಧ್ಯಾಹ್ನ 12 ರಿಂದ ಪ್ರಸಾದದ ವ್ಯವಸ್ಥೆ ಇರುತ್ತದೆ.

## ಆದರ್ಶ ವಿದ್ಯಾಲಯಕ್ಕೆ ಅರ್ಜಿ

ಹರಪನಹಳ್ಳಿ, ಜು. 17 - ತಾಲ್ಲೂಕಿನ ಅನಂತನಹಳ್ಳಿ ಬಳಿ ಇರುವ ಸರ್ಕಾರಿ ಆದರ್ಶ ವಿದ್ಯಾಲಯ(ಆರ್‌ಎಂಎಸ್‌ಎ)ದಲ್ಲಿ 7, 8 ಮತ್ತು 9ನೇ ತರಗತಿಗಳಿಗೆ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡಲು ಪ್ರವೇಶ ಪರೀಕ್ಷೆ ನಡೆಸಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪರೀಕ್ಷೆಯು ಇದೇ ದಿನಾಂಕ 27ರ ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1ರವರೆಗೆ ಆಯ್ದ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ವಿವರಗಳಿಗೆ ಶಾಲೆಯ ಮುಖ್ಯೋಪಾಧ್ಯಾಯ ಹೆಚ್.ಕೆ.ಚಂದ್ರಪ್ಪ ಅವರನ್ನು ಸಂಪರ್ಕಿಸಿ.

# ಸಾಮಾಜಿಕ ಜಾಲತಾಣದ ಬ್ಲಾಕ್ ಸಮಿತಿಗೆ ಹೆಚ್ಚಿನ ಬಲ ನೀಡಲು ಚಿಂತನೆ



ದಾವಣಗೆರೆ, ಜು.17 - ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಜಿಲ್ಲಾ ಸಮಿತಿ ಸಭೆಯು ಪಕ್ಷದ ಕಚೇರಿಯಲ್ಲಿ ಜಿಲ್ಲಾಧ್ಯಕ್ಷ ಕೆ.ಎಲ್.ಹರೀಶ್ ಬಸಾಪುರ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆಯಿತು. ಅತಿಥಿಗಳಾಗಿ ಸಾಮಾಜಿಕ ಜಾಲತಾಣದ ಜಿಲ್ಲಾ ಉಸ್ತುವಾರಿಗಳಾದ ದೇವಪುತ್ರ ಹಾಗೂ ಎಲ್.ಎಂ.ನಾಯ್ಕ್ ಉಪಸ್ಥಿತರಿದ್ದರು.

ಮುಂದಿನ ವಿಧಾನಸಭಾ ಚುನಾವಣಾ ದೃಷ್ಟಿಯಿಂದ, ಜಿಲ್ಲೆಯಲ್ಲಿ ಸಾಮಾಜಿಕ ಜಾಲತಾಣವನ್ನು ಬಲಪಡಿಸುವ ನಿಟ್ಟಿನಲ್ಲಿ ಜಿಲ್ಲಾ ಸಮಿತಿ ಹಾಗೂ ಬ್ಲಾಕ್ ಸಮಿತಿಗಳಿಗೆ ಇನ್ನೂ ಹೆಚ್ಚಿನ ಪದಾಧಿಕಾರಿಗಳನ್ನು ನೇಮಿಸುವ ಮೂಲಕ ಸಾಮಾಜಿಕ ಜಾಲತಾಣವನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಬಗ್ಗೆ ತೀರ್ಮಾನಿಸಲಾಯಿತು. ಜಿಲ್ಲೆಯಲ್ಲಿ ಪಕ್ಷಕ್ಕೆ ಉತ್ತಮ ವಾತಾವರಣವಿದ್ದು, ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಏಳನ್ನೂ ಸಹ ಪಕ್ಷ ಗೆಲ್ಲುವ ವಿಶ್ವಾಸವಿದ್ದು, ಸಾಮಾಜಿಕ ಜಾಲತಾಣ ಪಕ್ಷದ ಅಭ್ಯರ್ಥಿಗಳ ಪರವಾಗಿ ಹಗಲಿರುಳು ಕಾರ್ಯ ನಿರ್ವಹಿಸಲು ಕರೆ ನೀಡಲಾಯಿತು.

ಈ ಸಭೆಯಲ್ಲಿ ಉಪಾಧ್ಯಕ್ಷ ಹನುಮಂತಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಮೊಹಮದ್ ಜಿಕ್ರಿಯಾ, ಬೊಮ್ಮಲಿಂಗಪ್ಪ, ರಾಜು ಸಾದತ್, ರುದ್ರಮುನಿ, ಕಾರ್ಯದರ್ಶಿಗಳಾದ ದರ್ಶನ್ ಕಂಸಾಗರ, ಬಿ.ನಾಗರಾಜ್, ಕೆ.ಟಿ. ಪರಶುರಾಮ್, ಮಲ್ಲಿಕಾರ್ಜುನ್, ವೀರಭದ್ರಪ್ಪ, ಹಾಲೇಶ್, ಗುರು ಪಾಟೀಲ್ ಭಾಗವಹಿಸಿದ್ದರು.

## ಅಲೆಮಾರಿ ಅಭಿವೃದ್ಧಿ ನಿಗಮ : ನೇರ ಸಾಲಕ್ಕೆ ಅರ್ಜಿ ಆಹ್ವಾನ

ದಾವಣಗೆರೆ,ಜು.17 - ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಸ್ವಯಂ ಉದ್ಯೋಗ ನೇರ ಸಾಲ ಯೋಜನೆಗಳ ಅನುಷ್ಠಾನಕ್ಕಾಗಿ, ಹಿಂದುಳಿದ ವರ್ಗಗಳ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಕ್ಕೆ ಸೇರಿದ ಜನರ ಆರ್ಥಿಕ ಅಭಿವೃದ್ಧಿಗಾಗಿ, ಸಾಲ ಹಾಗೂ ಸಹಾಯ ಧನ ಸೌಲಭ್ಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಗಸ್ಟ್ 3 ಕೊನೆಯ ದಿನಾಂಕವಾಗಿದ್ದು, ಅರ್ಜಿಗಳನ್ನು ಸುವಿಧಾ ತಂತ್ರಾಂಶದ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಯನ್ನು ಅಥವಾ ನಿಗಮದ ಸಹಾಯವಾಣಿ : 08192-230934 ಸಂಪರ್ಕಿಸಬಹುದು.

## ಮನೆಗಳ ಮೇಲೆ ದಾಳಿ

(1ನೇ ಪುಟದಿಂದ) ಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳನ್ನು ಲೂಟಿ ಮಾಡಿಕೊಂಡು ಹೋದರು. ನಂತರ ಮತ್ತೆ ಬಂದ ಇನ್ನೂ ಕೆಲವರು ಮನೆಯಲ್ಲಿ ಲೂಟಿ ಮಾಡಲು ಏನೂ ಇಲ್ಲದೇ ಇರುವುದನ್ನು ನೋಡಿ ಮನೆಗೆ ಬೆಂಕಿ ಹಚ್ಚಿದ್ದಾರೆ ಎಂದು ಸಂತ್ರಸ್ತರಾದ ದೀಪಾಲಿ ರಾಣಿ ಹೇಳಿದ್ದಾರೆ. ಮೊದಲ ಸುತ್ತಿನ ದಾಳಿಯ ನಂತರ ಊರಲ್ಲಿ ಸಾಕಷ್ಟು ಜನರು ಮನೆ ಬಿಟ್ಟು ಹೋಗಿದ್ದರು. ಬಹಳಷ್ಟು ಮನೆಗಳಿಗೆ ಬೀಗ ಹಾಕಲಾಗಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಬರುವ ಗಾಳಿ ಸುದ್ದಿಗಳು, ಇಲ್ಲವೇ ನಕಲಿ ಪೋಸ್ಟ್‌ಗಳನ್ನೇ ನೆಪ ಮಾಡಿಕೊಂಡು ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದಾಳಿ ನಡೆಸುವ ಪ್ರವೃತ್ತಿ ಬಾಂಗ್ಲಾದೇಶದಲ್ಲಿ ಹೆಚ್ಚಾಗುತ್ತಿದೆ.

ಕಳೆದ ವರ್ಷವೂ ಹಿಂದೂ ದೇವಾಲಯಗಳ ಮೇಲೆ ದಾಳಿ ನಡೆಸಲಾಗಿತ್ತು.

# ಜೀವನೋತ್ಸಾಹಕ್ಕೆ ಸಮಾಜಮುಖಿ ಸೇವಾ ಚಟುವಟಿಕೆಗಳು ಸ್ಫೂರ್ತಿದಾಯಕ



### ಭರಮಸಾಗರದ ಪವಮಾನ ಪ್ರತಿಷ್ಠಾನದ ಅಭಿನಂದನಾ ಕಾರ್ಯಕ್ರಮದಲ್ಲಿ ಪ್ರೇರಣಾ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಚೇತನ ಶಿವಕುಮಾರ್ ಅಭಿಮತ

ಭರಮಸಾಗರ, ಜು.17 - ಕಷ್ಟ-ಕಾರ್ಪಣ್ಯಗಳ ಖಿನ್ನತೆಗಳನ್ನು ದೂರ ಮಾಡಲು ಜೀವನೋತ್ಸಾಹಕ್ಕೆ ಸಾಂಸ್ಕೃತಿಕ, ಸಾಮಾಜಿಕ ಕಾಳಜಿಯ ಸಮಾಜಮುಖಿ ಸೇವೆ ಚಟುವಟಿಕೆಗಳು ನಮ್ಮ ಜೀವನಕ್ಕೆ ಸ್ಫೂರ್ತಿದಾಯಕವಾಗುತ್ತವೆ ಎಂದು ದಾವಣಗೆರೆಯ ಪ್ರೇರಣಾ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಚೇತನ ಶಿವಕುಮಾರ್ ತಮ್ಮ ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸಿದರು.

ಭರಮಸಾಗರದ ಪವಮಾನ ಪ್ರತಿಷ್ಠಾನದ ಆಶ್ರಯದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಸಾಧಕರು ಮತ್ತು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ಮಕ್ಕಳಿಗೆ ಸನ್ಮಾನ ಸಮಾರಂಭವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಡಿವಿಎಸ್ ಹೈಸ್ಕೂಲ್ ಮುಖ್ಯೋಪಾಧ್ಯಾಯ ಗುರುಸಿದ್ದೇಶ್ವರ ಮಾತನಾಡಿ, ಮಕ್ಕಳೂ ಸೇರಿದಂತೆ ಸಮಾಜದ ಎಲ್ಲಾ ಸಾಧಕರು ಸಾಧನೆ ಮಾಡಲು ಪ್ರೋತ್ಸಾಹ, ಉತ್ತೇಜನ ನೀಡುವವರು ಮಾತೃ ಸ್ವರೂಪದ ಮಹಿಳೆ ಎಂದರು.

ಕಲಾಕುಂಚ ಬೆಂಗಳೂರು ಪ್ರತಿನಿಧಿ ಶ್ರೀಮತಿ ರೇಖಾ ಪುರಾಣಿಕ್ ಮಾಡನಾಡಿ, ಕಳೆದ 18 ವರ್ಷಗಳಿಂದ ಯಾವುದೇ ನಿರೀಕ್ಷೆ, ಅಪೇಕ್ಷೆ ಇಲ್ಲದೆ ನಿಸ್ವಾರ್ಥದಿಂದ ನಿರಂತರವಾಗಿ ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಕ್ರಿಯಾಶೀಲವಾಗಿ ನಡೆಸಿಕೊಂಡು ಹೋಗುತ್ತಿರುವ ಪವಮಾನ ಪ್ರತಿಷ್ಠಾನದ ಬಿ.ಜೆ. ಅನಂತಪದ್ಮನಾಭರಾವ್ ಅವರ ಸಾಧನೆ ನಿಜಕ್ಕೂ ಶ್ಲಾಘನೀಯ ಎಂದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಷಮೀಮ್ ಪಾಷಾ ಅವರ ತಂದೆ ದಿ. ಹಯಾತ್ ಸಾಬ್ ಮತ್ತು ಅನಂತ ಪದ್ಮನಾಭರಾವ್ ಅವರ ತಂದೆ ದಿ. ಜಯರಾಮ್‌ರ ಆತ್ಮೀಯ ಬಾಂಧವ್ಯವನ್ನು ಸ್ಮರಿಸುತ್ತಾ, ಅನಂತ ಪದ್ಮನಾಭರಾವ್ ಅವರನ್ನು ಸನ್ಮಾನಿಸಿದರು.

ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ, ಸಾಧನೆ ಮಾಡಿದ ಪಿ.ಎಸ್. ನಾಗಶ್ರೀ, ಸಿ.ಕೆ. ಪೂಜಾ, ಜಿ.ಎನ್. ಜಾಹ್ನವಿ, ಎಸ್.ನಿವೇದಿತ, ಓ. ತೇಜ ಅವರುಗಳನ್ನು ಪುಷ್ಪ ವೃಷ್ಟಿಯೊಂದಿಗೆ ಪುಸ್ತಕದ ಮೇಲೆ ಕಿರೀಟವಿಟ್ಟು ಶಾರದಾ ಪುರಸ್ಕಾರ ಪ್ರಶಸ್ತಿಯೊಂದಿಗೆ ಸನ್ಮಾನಿಸಿ, ಗೌರವಿಸಲಾಯಿತು. ಪ್ರತಿಷ್ಠಾನದ ಸಂಸ್ಥಾಪಕರೂ, ಪತ್ರಕರ್ತರಾದ ಬಿ. ಜೆ. ಅನಂತ ಪದ್ಮನಾಭ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಭರಮಸಾಗರದ ಗ್ರಾ.ಪಂ ಅಧ್ಯಕ್ಷರಾದ ಶ್ರೀಮತಿ ತಾಜ್ ಬಿ. ರಜಾಕ್‌ಸಾಬ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಪ್ರತಿಷ್ಠಾನದ ಅಧ್ಯಕ್ಷ, ಹಿರಿಯ ಚೇತನ ಶ್ರೀಮತಿ ಜಯಮ್ಮ ಜಯರಾವ್, ಪ್ರಧಾನ ಕಾರ್ಯದರ್ಶಿ ಶ್ರೀಮತಿ ವಿಜಯಲಕ್ಷ್ಮಿ ಅನಂತಪದ್ಮನಾಭರಾವ್ ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿವಿಧ ಕ್ಷೇತ್ರಗಳಲ್ಲಿ ಸಾಮಾಜಿಕ ಕಾಳಜಿಯ ಸೇವೆ ಸಲ್ಲಿಸಿ, ಸಾಧನೆ ಮಾಡಿದ ಪಿ.ಎಸ್. ಲೋಕನಾಥ ಆಚಾರ್, ಸಿದ್ದಪ್ಪ, ಎ.ವಿ. ಗುರುಸಿದ್ದಪ್ಪ, ಡಾ. ರಜನಿ, ಬಿ.ಎಸ್. ನಾಗರಾಜ್, ರುದ್ರಮುನಿ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು. ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ವೇದಿಕೆಯನ್ನು ನಿರ್ವಹಿಸಿದರು.

ಶ್ರೀಮತಿ ಲತಾ ಶೇಷಗಿರಿರಾವ್ ಪ್ರಾರ್ಥಿಸಿದರು. ಕು. ಬಿ.ಎಂ. ಅಂಜನಾರಾವ್, ಕು. ಅಕ್ಷತಾರಾವ್ ಕಾರ್ಯಕ್ರಮ ನಿರೂಪಿಸಿದರು.


**ಮನೆಯಲ್ಲಿ ನೀರು ಸೋರುವುದಕ್ಕೆ ಪರಿಹಾರ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್
81050 40110

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್‌ಗರ್ಲ್, ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ.-1

**ಬಾಡಿಗೆಗೆ**
ಪಿ.ಜೆ ಬಡಾವಣೆ 8ನೇ ಮೇನ್, 8ನೇ ಕ್ರಾಸ್‌ನಲ್ಲಿ 3000 ಚ.ಅಡಿ ಮೊದಲನೇ ಮಹಡಿ ಬಾಡಿಗೆಗಿದೆ. (ಡಾ. ಸಿದ್ದೇಶ್ ಬಿಲ್ಡಿಂಗ್)
ಸಂಪರ್ಕಿಸಿ
94480 28103

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ Cook ಬೇಕಾಗಿದ್ದಾರೆ. ಸಂಬಳ 12,000. ಸಸ್ಯಹಾರಿ, ಮಾಂಸಹಾರಿ ಗೊತ್ತಿರಬೇಕು. ಊಟ, ರೂಂ. ಉಚಿತ ಸಂಪರ್ಕಿಸಿ :
97400 98064, 97400 98047

**ಸೈಟು ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ 3ನೇ ಮೇನ್ ರೋಡ್, 80x60 East
ದೀಪಕ್ ಪಿ.ವಿ.
97405 90636

**WANTED**
CS Faculty For Diploma College Davangere.
B.E, M.tech, BCA, MCA
PH: 94821 93206

**ಬೇಸಿಕ್‌ನಿಂದ ಸುಲಭ ಇಂಗ್ಲಿಷ್ ಕಲಿಯಿರಿ**
100% ಅತ್ಯುತ್ತಮ ಫಲಿತಾಂಶ
1000 ರೂ. ಮಾತ್ರ.
ಮಿರಜ್‌ಕರ್ ಟ್ಯುಟೋರಿಯಲ್
ಎವಿಕೆ ರಸ್ತೆ, ದಾವಣಗೆರೆ.
90369 96243

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
97432 17566, 91084 18233

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಸೌತ್ ಇಂಡಿಯನ್ ಮತ್ತು ನಾರ್ತ್ ಇಂಡಿಯನ್ ಅಡುಗೆ ಭಟ್ಟರು ಬೇಕಾಗಿದ್ದಾರೆ.
95354 37451

**ಮನೆ ಮಾರಾಟಕ್ಕಿದೆ**
16 3/4x 86= 1440.5 ಅಡಿ ಅಳತೆಯ ನೆಲ ಮಹಡಿ & ಮೊದಲನೇ ಮಹಡಿ ಇರುವ ಮನೆಯು # 977/1 ದಾವಣಗೆರೆ ಮಹಾನಗರದ ಹಳೇಪೇಟೆಯಲ್ಲಿ ಮಾರಾಟಕ್ಕಿದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
93434 75963, 97401 63814

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**2 BHK HOUSE FOR RENT**
Near Netravati Ladies Hostel, Ground Floor, Anjaneya Badavane, Davangere.
Ph. : 88845 64642

**ಬೇಕಾಗಿದ್ದಾರೆ**
ಟೈಲ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ : ಸಮ್ಯಕ್ ಸೆರಾಮಿಕ್ಸ್
ಹದಡಿ ರೋಡ್, ಉದಯ ಸೂಪರ್ ಮಾರ್ಕೆಟ್ ಹತ್ತಿರ, ದಾವಣಗೆರೆ.
96200 95520

**ಬೇಕಾಗಿದ್ದಾರೆ**
ಆರೆಂಜ್ ಕಾರ್ ಕೇರ್
ವಿದ್ಯಾನಗರ ಮುಖ್ಯ ರಸ್ತೆ, ದಾವಣಗೆರೆ.
ಹುದ್ದೆ - ಕಾರ್ ಸರ್ವಿಸ್ ಅಡ್ವೈಸರ್ -1 (ಗಂಡು) ಅನುಭವ: ಕನಿಷ್ಠ 1 ವರ್ಷ
ಹುದ್ದೆ: ಅಕೌಂಟೆಂಟ್
ಅನುಭವ: 1 ರಿಂದ 2 ವರ್ಷ ಆಕರ್ಷಕ ಸಂಬಳ
81235 06863, 99640 71556

**ಗೋಡೌನ್ ಬಾಡಿಗೆಗೆ ಇದೆ**
ಹರಪನಹಳ್ಳಿ ಮುಖ್ಯರಸ್ತೆ, ಬಿ ಕಲ್ಪನಹಳ್ಳಿ ಗ್ರಾಮ, ಹೆಚ್.ಪಿ. ಪೆಟ್ರೋಲ್ ಬಂಕ್ ಹತ್ತಿರ 54 ಅಡಿ ಅಗಲ, 80 ಅಡಿ ಉದ್ದ ಇರುವ ಗೋಡೌನ್ ಬಾಡಿಗೆಗೆ ಇದೆ.
45 HP power supply available
80882 66100, 96112 56056
78292 07753

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಎಸ್.ಎಲ್.ಎನ್. ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್
ಪ್ರಖ್ಯಾತ ಐ.ಟಿ. ಕಂಪನಿ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು. ಹೌಸ್ ಕೀಪಿಂಗ್ ಕೆಲಸಕ್ಕೆ ಹಾಗೂ ಟೆಲಿಫೋನ್ ಆಪರೇಟರ್ ಹುಡುಗರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30 ವರ್ಷಗಳು. ಸೌಲಭ್ಯಗಳು : ಸಂಬಳ, ಬೋನಸ್, ಲೀವ್ ಪೇಮೆಂಟ್, ಯೂನಿಫಾರ್ಮ್, ಶೂಸ್, ಪಿ.ಎಫ್., ಇಎಸ್‌ಐ., ಗ್ರಾಚ್ಯುಟಿ ಮತ್ತು ಇತರೆ ಸೌಲಭ್ಯವಿರುತ್ತದೆ.
99002 67373, 99002 77949, 99005 19554

**ಗ್ಯಾಸ್ ಗೀಜರ್ ವಾಟರ್ ಪ್ಯೂರಿ ಫೈಯರ್ ಡೋರ್ ಸರ್ವೀಸ್‌ಗಾಗಿ**
ಜ್ಯೋತಿ ಮೆಟಲ್ಸ್, ದಾವಣಗೆರೆ
98800 34643, 94800 83754

**ಕೆಲಸಕ್ಕೆ ಬೇಕಾಗಿದ್ದಾರೆ**
ಬೇಸಿಕ್ ಕಂಪ್ಯೂಟರ್ ಆಗಿರುವ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ವಿಳಾಸ: ಮಂಜು ಡಿಜಿಟಲ್
ಅಶೋಕ ರೋಡ್, 1st ಕ್ರಾಸ್, ವಿ.ವಿ.ಎಸ್ ಕಾಂಪ್ಲೆಕ್ಸ್, ದಾವಣಗೆರೆ.
98449 05344

**ಬೇಕಾಗಿದ್ದಾರೆ**
ಅಪೆ ಆಟೋ ಡೀಸೆಲ್, LPG, CNG ಪ್ಯಾಸೆಂಜರ್, ಗೂಡ್ಸ್ ಅಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಮಾರಾಟ ಮಾಡಲು ತಾಲ್ಲೂಕುವಾರು
ಸೇಲ್ಸ್ ಎಕ್ಸಿಕ್ಯೂಟಿವ್ಸ್-4
(ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.)
ವಿದ್ಯಾರ್ಹತೆ: SSLC to Degree.
ಆಕರ್ಷಕ ಸಂಬಳ + Incentive+TA, DA.
**ಬೇಕಾಗಿದ್ದಾರೆ**
ವರ್ಕ್‌ಷಾಪ್ ಸೂಪರ್‌ವೈಸರ್-2
(5 ವರ್ಷ ಅನುಭವ/ಫ್ರೆಶರ್‌ಗೂ ಸಹ ಆದ್ಯತೆ)
ಡೀಜಲ್ ಮೆಕ್ಯಾನಿಕ್-4
ಹೆಲ್ಪರ್ಸ್-4
ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ:
ಸಮಯ: ಮ. 3 ರಿಂದ 5
ಫೋನ್ /ಮೊಬೈಲ್ ವಿಚಾರಣೆ ಇರುವುದಿಲ್ಲ
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-6.

**ಪ್ರವೇಶ ಪ್ರಕಟಣೆ 2022-23**
ಹೆಲ್ತ್ ಇನ್ಸ್‌ಪೆಕ್ಟರ್ DHI | ಲ್ಯಾಬ್ ಟೆಕ್ನಾಲಜಿ DMLT
ಇಮೇಜಿಂಗ್ ಟೆಕ್ನಾಲಜಿ X-ray | ಆಪರೇಷನ್ ಟೆಕ್ನಾಲಜಿ DOT
ಡಿಪ್ಲೋಮೋ ಫಾರ್ಮಸಿ D pharm
ಕೆಲವೇ ಸೀಟುಗಳು ಮಾತ್ರ
ಎಲ್ಲ ವಿದ್ಯಾರ್ಥಿಗಳಿಗೂ ಸ್ಕಾಲರ್‌ಶಿಪ್ ಸೌಲಭ್ಯವಿದೆ. ಹಾಸ್ಟೆಲ್ ಸೌಲಭ್ಯವಿದೆ.
VS PARAMEDICAL COLLEGE, DAVANAGERE.
8553278258
9019580600

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ -2 ವರ್ಷ
ಕೇವಲ 6 ತಿಂಗಳ ಟ್ರೈನಿಂಗ್ ನಂತರ ನರ್ಸ್ ಗಳಾಗಿ ಕೆಲಸ ಮಾಡಬಹುದು.
ವಿದ್ಯಾರ್ಹತೆ :SSLC, PUC ಪಾಸ್ /ಫೇಲ್ PUC :(NIOS) ARTS/COM/SCI ನೇರ ಪರೀಕ್ಷೆ.ಪ್ರಿಲ್ 22ರ ಪರೀಕ್ಷೆ ಯಲ್ಲಿ ಫೇಲಾದವರಿಗೆ ಅಕ್ಟೋಬರ್ ನಲ್ಲಿ ಪರೀಕ್ಷೆಯ ಅವಕಾಶ.
ಗಂಗೋತ್ರಿ ಎಜುಕೇಶನಲ್ ಟ್ರಸ್ಟ್. (ರಿ)
ಲಾಯರ್ ರೋಡ್ ದಾವಣಗೆರೆ.
8660235013
ಬೇಕಾಗಿದ್ದಾರೆ: ರಿಸೆಪ್ಷನ್ :5000/- ವೇತನ, ಪಿಯುಸಿ ಪಾಸ್/ಫೇಲ್

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
Computer Operator Cum Receptionist.
Gents, Day and Night.
Contact :
Shramajeevi Delux Lodge
Davangere
99869 16627

**Introducing**
Mental Maths
(2nd Std to 7th Std)
Bruit Abacus and Vedic Maths
Near Amrithvidylaya School
M: 97390 66956

**Room For Rent**
Single Attached Room with all facilities available with wardrobe and cots system. At MCC "A" Block, Near Ram Krishna Ashrama, Beside Ganesha Temple
97405 69252

**ಮಾರಾಟಕ್ಕಿದೆ**
ದಾವಣಗೆರೆಯಿಂದ 20 ರಿಂದ 25 ಕಿ.ಮೀ ವ್ಯಾಪ್ತಿಯಲ್ಲಿ ಅಡಿಕೆ ತೋಟ, ನೀರಾವರಿ ಹಾಗೂ ಒಣ ಭೂಮಿ ಮತ್ತು ದಾವಣಗೆರೆ ನಗರದಲ್ಲಿ ಯಾವುದೇ ಅಳತೆಯ ನಿವೇಶನ ಮತ್ತು ಇತ್ತೀಚಿಗೆ ನಿರ್ಮಿಸಿದ ಹೊಸ ಮನೆ ಖರೀದಿ ಮತ್ತು ಮಾರಾಟಕ್ಕಾಗಿ ಸಂಪರ್ಕಿಸಿ.
99727 00107

**WANTED**
1. Lab Technician - Dip. in Lab technician
2. Receptionist - Any degree holder can Apply
Shilpa Diagnostics,
MCC B Block,
Near Swimming Pool, Davangere.
98440 65638

**Required**
ANM, GNM,
B.Sc Nursing Candidates.
Experienced preferred
Contact :
Vishwas Super Speciality Hospital, Davangere.
97435 86350

**House For Rent**
2 BHK Indipendent House For Rent
# 630, 7th Main P.J. Extn opp: Sandeep Nursing Home Residential Commercial (Drs Clinic also)
99722 93785
(Veg-Only)

**Wanted Teachers**
B.Sc / B.Ed, Maths Science, English
Good Communication & Fluency in English
99641 10736

**TEACHERS WANTED**
BA B.Ed English major - 01
B.Sc B.Ed - 02
Candidates are wanted to work in a reputed school. Candidates with good communication skill.
88848 27727

**ಬೇಕಾಗಿದ್ದಾರೆ**
ಬಿನ್ನಿ ಕಂಪನಿ ರೋಡ್‌ನಲ್ಲಿರುವ ಮನೆಗೆ ಲಿಂಗಾಯತ ಅನುಭವವುಳ್ಳ ಅಡುಗೆಯವರು ಬೇಕಾಗಿದ್ದಾರೆ.
63631 97523

**ಅಕೌಂಟ್ಸ್ ಆಡಿಟಿಂಗ್ ಸರ್ವೀಸ್**
ಹೆಸರು: ಅರ್ಜುನಭಟ್ಟ S.M
ಜಿ.ಎಸ್.ಟಿ ರೇಜಿಸ್ಟ್ರೇಷನ್, ಜಿಎಸ್‌ಟಿ ಫೈಲಿಂಗ್ & ರಿಕನ್ಸಿಲೇಷನ್, TDS ಕ್ಯಾಲ್ಕುಲೇಷನ್ & ರೀಟರ್ನ್ಸ್ & ಎಲ್ಲಾ ಆಡಿಟಿಂಗ್ ವರ್ಕ್ಸ್. ಸಂಪರ್ಕಿಸಿ:
95917 74803

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ ತೆಂಗು , ಮಾವು ಸಪೋಟ, ಶ್ರೀಗಂಧ, ಹೆಬ್ಬೇವು, ಮಹಾಘನಿ, ನಿಂಬೆ, ದಾಳಿಂಬೆ, ಗುಲಾಬಿ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ಸಂಪರ್ಕಿಸಿ.
94484 39639

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ಉದ್ಯೋಗಾವಕಾಶ**
ಯುವಕ /ಯುವತಿಯರಿಗೆ, ನಿರುದ್ಯೋಗಿಗಳಿಗೆ, ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಯಾವುದೇ ವಿದ್ಯಾಭ್ಯಾಸ ಇದ್ದರೂ ಪಾರ್ಟ್ ಟೈಮ್ /ಫುಲ್ ಟೈಮ್ ಕೆಲಸ ಮಾಡಿ ತಿಂಗಳಿಗೆ 10 ರಿಂದ 50 ಸಾವಿರದವರೆಗೆ ಗಳಿಸುವ ಮತ್ತು ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ
78999 02781, 70194 26891

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

## ಪಂಜಾಬ್ : ಅತಿ ವೇಗಿಗಳಿಗೆ ಸಮುದಾಯ ಸೇವೆ, ರಕ್ತದಾನದ ಶಿಕ್ಷೆ

ಚಂಡೀಘಡ, ಜು. 17 – ಅತಿ ವೇಗವಾಗಿ ವಾಹನ ಚಲಾಯಿಸುವವರು ಹಾಗೂ ಪಾನಮತ್ತರಾಗಿ ವಾಹನ ಚಲಾಯಿಸುವವರಿಗೆ ಶಾಲೆಗಳಲ್ಲಿ ಮಕ್ಕಳಿಗೆ ಪಾಠ ಮಾಡುವ ಹಾಗೂ ಆಸ್ಪತ್ರೆಗಳಲ್ಲಿ ಸಮುದಾಯ ಸೇವೆ ಮಾಡುವ ಇಲ್ಲವೇ ರಕ್ತದಾನ ಮಾಡುವ ದಂಡ ವಿಧಿಸಲಾಗುವುದು ಎಂದು ಪಂಜಾಬ್ ಸರ್ಕಾರ ತಿಳಿಸಿದೆ. ಈ ಬಗ್ಗೆ ಸಾರಿಗೆ ಇಲಾಖೆ ಆದೇಶವೊಂದನ್ನು ಹೊರಡಿಸಿದ್ದು, ಅತಿ ವೇಗ ಹಾಗೂ ಮದ್ಯ ಸೇವಿಸಿ ವಾಹನ ಚಲಾಯಿಸುವವರು ಸಮುದಾಯ ಸೇವೆಯಲ್ಲಿ ತೊಡಗಬೇಕಿದೆ ಎಂದು ತಿಳಿಸಿದೆ.

ತಪ್ಪು ಮಾಡಿದವರಿಗೆ ಸಂಚಾರಿ ನಿಯಮಗಳ ಬಗ್ಗೆ ಕಲಿಸಲಾಗುವುದು. ಅವರು ಹತ್ತಿರದ ಹೈಸ್ಕೂಲ್‌ಗಳಲ್ಲಿ ಕನಿಷ್ಠ 20 ವಿದ್ಯಾರ್ಥಿಗಳಿಗೆ ಪಾಠ ಕಲಿಸಬೇಕಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಆದರೆ, ತಪ್ಪು ಮಾಡಿದವರು ರಸ್ತೆ ಸುರಕ್ಷತೆ ಬಗ್ಗೆ ಪಾಠ ಮಾಡುತ್ತಾರೋ ಅಥವಾ ಬೇರೆ ವಿಷಯದ ಬಗ್ಗೆ ಪಾಠ ಮಾಡುತ್ತಾರೋ ಎಂಬುದನ್ನು ಆದೇಶದಲ್ಲಿ ಸ್ಪಷ್ಟಪಡಿಸಿಲ್ಲ.

ತಪ್ಪು ಮಾಡಿದವರು ಹತ್ತಿರದ ಆಸ್ಪತ್ರೆಯಲ್ಲಿ ವೈದ್ಯರು ಹೇಳುವ ರೀತಿ ಎರಡು ಗಂಟೆ ಕಾಲ ಸಮುದಾಯ ಸೇವೆ ಮಾಡಬೇಕು. ಹತ್ತಿರದ ರಕ್ತ ಬ್ಯಾಂಕ್‌ಗೆ ತೆರಳಿ ರಕ್ತದಾನ ಮಾಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ಕೋಟಿ ರೂ. ಗುರು ಕಾಣಿಕೆ ಪಡೆದು, ಗುರುಭವನಕ್ಕೆ ದೇಣಿಗೆ ನೀಡಿದ ಶರಣರು



ದಾವಣಗೆರೆ, ಜು.17 - ನಗರದ ಶ್ರೀ ಶಿವಯೋಗಾಶ್ರಮದಲ್ಲಿ ಮೊನ್ನೆ ನಡೆದ ಶ್ರೀ ಶಿವಮೂರ್ತಿ ಮುರುಘಾ ಶರಣರ ಪೀಠಾರೋಹಣದ ತೃತೀಯ ದಶಮಾನೋತ್ಸವ ಅಭಿನಂದನಾ ಸಮಾರಂಭದಲ್ಲಿ ಶ್ರೀ ಶಿವಮೂರ್ತಿ ಮುರುಘಾ ಶರಣರನ್ನು ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಒಂದು ಕೋಟಿ ರೂ.ಗಳನ್ನು ಗುರು ಕಾಣಿಕೆಯಾಗಿ ನೀಡಲಾಯಿತು.

ಒಂದು ಕೋಟಿ ರೂ.ಗಳ ಕಾಣಿಕೆಯನ್ನು ಪಡೆದು ಮಾತನಾಡಿದ ಶರಣರು, ಈ ಬೃಹತ್ ಮೊತ್ತದ ಹಣವನ್ನು ನಾವು ಚಿತ್ರದುರ್ಗಕ್ಕೆ ಒಯ್ಯುವುದಿಲ್ಲ, ಅದನ್ನು ಪುನಃ ನಾವು ವಾಪಸ್ ಕಮಿಟಿಗೆ ನೀಡಿ ಹೋಗುತ್ತಿದ್ದೇವೆ.

ಈ ಹಣಕ್ಕೆ ಭಕ್ತರಿಂದ ಮತ್ತಷ್ಟು ಹಣ ಕೂಡಿಸಿ ಅದನ್ನು ಶಿವಯೋಗಾಶ್ರಮದ ಆವರಣದಲ್ಲಿ ಗುರು ಭವನವನ್ನು ನಿರ್ಮಾಣ ಮಾಡಿ. ಇದರಿಂದ ನಮಗೆ ಹಾಗೂ ಬಂದ ಅತಿಥಿಗಳಿಗೆ ತಂಗಲು ಒಂದು ಒಳ್ಳೆಯ ವ್ಯವಸ್ಥೆಯಾಗುತ್ತದೆ. ಅದನ್ನು ಶೀಘ್ರವಾಗಿ ಕೆಲಸ ಪ್ರಾರಂಭಿಸಲು ಹೇಳಿದರು. ಈ ಸಂದರ್ಭಕ್ಕೆ ಸಾಕ್ಷಿಯಾದ ಭಕ್ತಾದಿಗಳು ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಇಸ್ರೋದ ವಿಜ್ಞಾನಿ ಎ.ಎಸ್. ಕಿರಣ್ ಕುಮಾರ್ , ಮಾಜಿ ಶಾಸಕ ಎಚ್.ಎಸ್.ಶಿವಶಂಕರ್, ಟ್ರಸ್ಟ್ ಕಾರ್ಯದರ್ಶಿ ಅಂದನೂರು ಮುಪ್ಪಣ್ಣ, ಪದಾಧಿಕಾರಿಗಳಾದ ಎಂ. ಜಯಕುಮಾರ್, ಎಸ್.ಓಂಕಾರಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಸಾಹಿತ್ಯದ ಜೊತೆ ಬದುಕನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿದ್ದ ಟಿ. ಗಿರಿಜಾ



**ಟಿ.ಗಿರಿಜಾರವರ ಸಂಸ್ಮರಣೆ ಕಾರ್ಯಕ್ರಮದಲ್ಲಿ ಹೆಚ್.ಬಿ. ಮಂಜುನಾಥ್**

ದಾವಣಗೆರೆ, ಜು. 17- ವಿನೋದ ಪ್ರಜ್ಞೆಯುಳ್ಳ ಟಿ. ಗಿರಿಜಾ ಅವರಲ್ಲಿ, ಹಿಡಿದ ಕಾರ್ಯವನ್ನು ಸಾಧಿಸುವ ದಿಟ್ಟತನವೂ ಇತ್ತು ಎಂದು ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ವನಿತಾ ಸಾಹಿತ್ಯ ವೇದಿಕೆ, ವನಿತಾ ಸಮಾಜ ಹಾಗೂ ಕರ್ನಾಟಕ ಲೇಖಕಿಯರ ಸಂಘ ದಾವಣಗೆರೆ ಶಾಖೆ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಹಿರಿಯ ಸಾಹಿತಿ ಟಿ.ಗಿರಿಜಾ ಅವರ ಸಂಸ್ಮರಣೆ, ದತ್ತಿ ಉಪನ್ಯಾಸ ಹಾಗೂ ಪುಸ್ತಕ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ, 'ಹಿರಿಯ ಸಾಹಿತಿ ಟಿ. ಗಿರಿಜಾರವರ ಬದುಕು ಮತ್ತು ಸಾಧನೆ' ಕುರಿತು ಅವರು ಮಾತನಾಡಿದರು.

ಗಿರಿಜಾ ಅವರು ಸಾಹಿತ್ಯದ ಜೊತೆ ತಮ್ಮ ಬದುಕನ್ನೂ ಕಟ್ಟಿಕೊಳ್ಳಬೇಕಾಗಿತ್ತು. ಎರಡೂ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಗಿರಿಜಾ ಅವರ ಬರವಣಿಗೆಗೆ ಪ್ರೋತ್ಸಾಹವೂ ಇರಲಿಲ್ಲ. ವಿರೋಧವೂ ಇರಲಿಲ್ಲ. ವಿರೋಧವಿದ್ದರೆ ಅವರು ಬರೆಯಲು ಸಾಧ್ಯವಾಗುತ್ತಿರಲಿಲ್ಲ. ಪ್ರೋತ್ಸಾಹವಿದ್ದಾಗ ನಿರೀಕ್ಷೆಗಳೂ ಹೆಚ್ಚಾಗಿ ಅದು ಹಿಂಸೆಯಾಗುತ್ತಿತ್ತು ಎಂದು ಹೇಳಿದರು.

ಜಿಲ್ಲೆಯ ಐತಿಹಾಸಿಕ ಮಾಹಿತಿ ಅದೊಂದು ಸಾಹಿತ್ಯವಾ? ಎಂದು ಮೂಗು ಮುರಿದವರಿಗೆ ಕಪಾಳ ಮೋಕ್ಷ ಮಾಡಿದಂತೆ ಕನ್ನಡ ಸಾಹಿತ್ಯ ಪರಿಷತ್ ಗಿರಿಜಾ ಅವರ ಕೃತಿಗೆ ಉತ್ತಮ ಮಹಿಳಾ ಸಾಹಿತ್ಯ ಕೃತಿ ಪ್ರಶಸ್ತಿ ನೀಡಿ ಗೌರವಿಸಿತ್ತು. ಗಿರಿಜಾ ಅವರು ಒಂದು ಕಡೆ ನೆಲೆ ನಿಲ್ಲಲಿಲ್ಲ ಎಂದು ಮಾತನಾಡಿದವರು ಸ್ವತಃ ಅವರು ನಿಂತ ನೆಲೆಯ ಬಗ್ಗೆ ತಿಳಿಯಲು ಗಿರಿಜಾ ಅವರು ಬರೆದ ಪುಸ್ತಕವನ್ನೇ ಆಶ್ರಯಿಸಬೇಕಾಗಿತ್ತು ಎಂದು ಮಂಜುನಾಥ್ ಹೇಳಿದರು.

ಟಿ. ಗಿರಿಜಾ ಅವರು ದಾವಣಗೆರೆ ಇತಿಹಾಸ ಕುರಿತು ಸಮಷ್ಠಿತಿಯಿಂದ ಬರೆದ ಪುಸ್ತಕವಾಗಿತ್ತು. ಯಾವುದೇ ಪೂರ್ವಾಗ್ರಹ ಪೀಡನೆ, ತಾರತಮ್ಯ ಇರಲಿಲ್ಲ. ಕೃತಿಯಲ್ಲಿ ಶ್ರೀಮಂತ ಮನೆತನವಾದ ರಾಜನಹಳ್ಳಿ ಮನೆತನದವರಿಗೆ ಎಷ್ಟು ಜಾಗ ಮೀಸಲಾಗಿತ್ತೋ ಅಷ್ಟೇ ಜಾಗವನ್ನು ಬುದ್ಧಿ ಮಾಂದ್ಯ ಜಾಫರ್ ಬಗ್ಗೆಯೂ ನೀಡಿದ್ದರು. ಜಾಫರ್‌ನಲ್ಲಿದ್ದ ಪ್ರಾಮಾಣಿಕತೆ, ಅವನನ್ನು ಆ ಭಾಗದ ಜನ ರಂಜನೆಗಾಗಿ ಬಳಸಿಕೊಳ್ಳುತ್ತಿದ್ದ ಮನೋವಿಕೃತಿ ಬಗ್ಗೆಯೂ ಗಿರಿಜಾ ಬರೆದಿದ್ದರು. ಎಲ್ಲದನ್ನೂ ಗಮನಿಸುವ, ಗಮನಿಸಿದ್ದನ್ನೆಲ್ಲಾ ದಾಖಲಿಸುವ ಗುಣ ಅವರಲ್ಲಿತ್ತು ಎಂದರು.

ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯ ಹಾಗೂ ಪುರುಷ ಸಾಹಿತ್ಯ ಎಂಬ ಭೇದವಿಲ್ಲ. ಅನೇಕರು ಸಾಹಿತ್ಯದಲ್ಲೂ ಲಿಂಗಭೇದ ತರುವ ವಿಕೃತಿ ಮೆರೆಯುತ್ತಿದ್ದರು. ಅಂತಹವರಿಗೆ ಇತಿಶ್ರೀ ಹಾಕಿದವರು ಗಿರಿಜಾ ಎಂದು ನುಡಿದರು.

ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷೆ ಮಲ್ಲಮ್ಮ ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ವನಿತಾ ಸಾಹಿತ್ಯ ವೇದಿಕೆಯ ಹುಟ್ಟಿಗೆ ಟಿ. ಗಿರಿಜಾ ಅವರೇ ಕಾರಣ ಎಂದರು.

ಗಿರಿಜಾ ಅವರು ತಮ್ಮ ಬರವಣಿಗೆ ಜೊತೆಗೆ ಮಹಿಳೆಯರನ್ನು ಒಂದುಗೂಡಿಸುವ ಕೆಲಸವನ್ನೂ ಮಾಡಿದರು. ಗಿರಿಜಾ ಅವರ ಕಾರ್ಯವನ್ನು ಜನತಾವಾಣಿ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದ ಹೆಚ್.ಎನ್. ಷಡಾಕ್ಷರಪ್ಪ ಅವರು ಶ್ಲಾಘಿಸಿದ್ದರು. ಮಹಿಳಾ ಲೇಖಕಿಯರಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿ ವರ್ಷ ಷಡಾಕ್ಷರಪ್ಪ ಅವರ ತಾಯಿ ನಂಜಮ್ಮ ಅವರ ಸ್ಮರಣಾರ್ಥ ವನಿತಾ ಸಾಹಿತ್ಯಶ್ರೀ ಪ್ರಶಸ್ತಿ ನೀಡುವ ಪರಿಪಾಠ ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಶಾಖೆ ಇವರ 'ತವರಿನ ಸೊಬಗು' (ಸಂಪಾದಿತ ಪ್ರಬಂಧ ಸಂಕಲನ), ಶ್ರೀಮತಿ ಗಿರಿಜಾ ಸಿದ್ದಲಿಂಗಪ್ಪ ಅವರ 'ದೀಪಗಳು ಮಾತನಾಡಿದವು' (ಕಥಾ ಸಂಕಲನ) ಹಾಗೂ ಮರೀಚಿಕೆ (ಕವನ ಸಂಕಲನ) ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

'ಸಾಹಿತ್ಯ ಮತ್ತು ಮಹಿಳೆ' ಕುರಿತು ಸಾಹಿತಿ ವಿಜಯ ಶ್ರೀಧರ್ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷೆ ಸುಮತಿ ಜಯಪ್ಪ, ಗಿರಿಜಾ ಸಿದ್ದಲಿಂಗಪ್ಪ, ಶೈಲಜಾ ಇತರರು ಉಪಸ್ಥಿತರಿದ್ದರು. ಅರುಂಧತಿ ರಮೇಶ್ ಸ್ವಾಗತಿಸಿದರು.

## ಹೆರಿಗೆ ವೇಳೆ ಶಿಶು ಸಾವಿನ ಪ್ರಮಾಣ ಒಂದಂಕಿಗೆ ಇಳಿಸಲು ಕ್ರಮ

**ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ**

ಬೆಂಗಳೂರು, ಜು. 17 – ಹೆರಿಗೆಯ ವೇಳೆ ಸಂಭವಿಸುವ ಶಿಶುಗಳ ಸಾವಿನ ಪ್ರಮಾಣವನ್ನು ಒಂದಂಕಿಗೆ ಇಳಿಸುವ ಗುರಿ ಹೊಂದಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಪ್ರಸಕ್ತ 1,000 ಸಜೀವ ಜನನಗಳಲ್ಲಿ 20ರಷ್ಟು ಮಕ್ಕಳು ಸಾವನ್ನಪ್ಪುತ್ತಿದ್ದಾರೆ.

5-6 ಜಿಲ್ಲೆಗಳನ್ನು ಹೊರತುಪಡಿಸಿದರೆ ಉಳಿದೆಡೆ ಹೆರಿಗೆ ವೇಳೆ ಸಂಭವಿಸುವ ಮಕ್ಕಳು ಹಾಗೂ ತಾಯಂದಿರ ಸಾವಿನ ಪ್ರಮಾಣ ಕಡಿಮೆ ಇದೆ. ಈ ಜಿಲ್ಲೆಗಳ ಕಡೆ ವಿಶೇಷ ಗಮನ ಹರಿಸಲಿದ್ದೇವೆ ಎಂದವರು ಹೇಳಿದ್ದಾರೆ.

ಮೊದಲ ಬಾರಿಗೆ ನಾವು ಆಶಯದ ತಾಲ್ಲೂಕುಗಳನ್ನು ಗುರುತಿಸಿದ್ದೇವೆ. ಈ ತಾಲ್ಲೂಕುಗಳಲ್ಲಿ ಶಿಕ್ಷಣ, ಆರೋಗ್ಯ, ಪೌಷ್ಠಿಕಾಂಶ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಿದ್ದೇವೆ ಎಂದು ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

## ತೆಲಂಗಾಣದ ವರಕವಿ ಸಿದ್ದಪ್ಪ, ದಕ್ಷ ಪ್ರಜಾಪತಿ ಜಯಂತಿ



ದಾವಣಗೆರೆ, ಜು.17- ತೆಲಂಗಾಣದ ವರಕವಿ ಸಿದ್ದಪ್ಪ ಮತ್ತು ದಕ್ಷ ಪ್ರಜಾಪತಿ ಜಯಂತಿ ಕಾರ್ಯಕ್ರಮ ನಗರದ ಸರ್ವಜ್ಞ ಸಂಶೋಧನಾ ಪೀಠದ ವತಿಯಿಂದ ಡಾ. ಎಂ.ಸಿ. ಮೋದಿ ವೃತ್ತದ ಸಮೀಪವಿರುವ ಕುಂಬಾರ ಸಮಾಜದ ವಿದ್ಯಾರ್ಥಿ ನಿಲಯದಲ್ಲಿ ಇಂದು ನೆರವೇರಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ರಾಜ್ಯ ಸೋಷಿಯಲ್ ಆಡಿಟ್ ಡೈರೆಕ್ಟರೇಟ್ ಆದ ಬೆಂಗಳೂರಿನ ಎ. ಕೇಶವಮೂರ್ತಿ, ಆಂಧ್ರಪ್ರದೇಶದ ಮತ್ತು ತೆಲಂಗಾಣದ ಜನರು ಕರ್ನಾಟಕದ ವರಕವಿ ಸರ್ವಜ್ಞರ ಜಯಂತಿ ಆಚರಿಸುತ್ತಿದ್ದು, ಅದು ತೆಲಂಗಾಣ ಮತ್ತು ಆಂಧ್ರಪ್ರದೇಶ ಇವುಗಳ ವರಕವಿ ಸಿದ್ದಪ್ಪ ಅವರ ಜಯಂತಿಯನ್ನು ಕರ್ನಾಟಕದಲ್ಲಿ ಆಚರಿಸುತ್ತಿರುವುದು ಎರಡೂ ರಾಜ್ಯಗಳ ಸೌಹಾರ್ದತೆಗೆ ನಾಂದಿಯಾಗಲಿದೆ. ಇದು ಸಾಂಸ್ಕೃತಿಕ ಕೊಡುಕೊಳ್ಳುವಿಕೆಯ ಸಂಕೇತವಾಗಿದೆ ಎಂದು ಅಭಿಪ್ರಾಯಪಟ್ಟರು.

ವರಕವಿ ಸಿದ್ದಪ್ಪ ಅವರು ಜ್ಞಾನಬೋಧೆಯಂತಹ ಬೃಹತ್ ಸಾಹಿತ್ಯ ಗ್ರಂಥವನ್ನು ರಚಿಸಿದ್ದು, ಸಂಪೂರ್ಣ ಸಾಮಾಜಿಕ ನ್ಯಾಯದ ಸಾಹಿತ್ಯವಾಗಿದೆ. ಅವರು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಮೂಢನಂಬಿಕೆಯನ್ನು ತೊಡೆದು ಹಾಕುವ ಜಾತಿ, ಮತ, ಧರ್ಮಗಳ ಸಂಕೋಲೆಯಿಂದ ಮಾನವ ಜನಾಂಗವನ್ನು ಬಿಡಿಸುವ ಮಹತ್ತರವಾದ ಕಾರ್ಯ ಮಾಡಿದ್ದಾರೆ. ಕರ್ನಾಟಕದಲ್ಲಿ ಕುವೆಂಪು ಹೇಗೋ ಅದೇ ತಲೆಮಾರಿನ ಸ್ವಲ್ಪ ಹಿರಿಯ ವರಕವಿ ಸಿದ್ದಪ್ಪ ದಕ್ಷಿಣ ಭಾರತದ ಒಬ್ಬ ಸಾಮಾಜಿಕ ನ್ಯಾಯದ ಕ್ರಾಂತಿ ಪುರುಷರಾಗಿದ್ದಾರೆ ಎಂದು ಅವರ ಜಯಂತಿ ಆಚರಿಸುತ್ತಿರುವುದು ರಾಜ್ಯ, ರಾಜ್ಯಗಳ ನಡುವೆ ಭಾಷೆ, ಭಾಷೆಗಳ ನಡುವೆ ಇರುವ ಅಡ್ಡಗೋಡೆಗಳನ್ನು ಕೆಡವಿ (5ನೇ ಪುಟಕ್ಕೆ)

# ರೋಗ ತಡೆ ಅರಿವನ್ನು ವೈದ್ಯರು ಜನರಲ್ಲಿ ಮೂಡಿಸುವುದು ಅವಶ್ಯ

## ವನಿತಾ ವೈದ್ಯ ವೇದಿಕೆಯ ಬ್ಯಾನರ್ ಅನಾವರಣಗೊಳಿಸಿದ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಜು. 17- ಮನುಷ್ಯನ ದೈನಂದಿನ ಜೀವನ ಶೈಲಿಯಿಂದ ರೋಗ ಬಾರದಂತೆ ತಡೆಗಟ್ಟುವ ಬಗೆ ಹೇಗೆ, ಕಾಯಿಲೆ ಬಂದಾಗ ಹೇಗೆ ನಿಯಂತ್ರಣದಲ್ಲಿಡಬೇಕು ಎಂಬುದರ ಬಗ್ಗೆ ವೈದ್ಯರು ಜನರಲ್ಲಿ ತಿಳಿವಳಿಕೆ ಮೂಡಿಸುವ ಅವಶ್ಯವಿದೆ. ಆಗ ಮಾತ್ರ ವೈದ್ಯರ ಕರ್ತವ್ಯ ಪೂರ್ಣಗೊಳ್ಳಲು ಸಾಧ್ಯವಿದೆ ಎಂದು ಬಾಪೂಜಿ ವಿದ್ಯಾಸಂಸ್ಥೆ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ವನಿತಾ ಸಮಾಜದ ಸಭಾಂಗಣದಲ್ಲಿ ನಿನ್ನೆ ಏರ್ಪಾಡಾಗಿದ್ದ ವನಿತಾ ವೈದ್ಯ ವೇದಿಕೆಯನ್ನು ವೇದಿಕೆಯ ಬ್ಯಾನರ್ ಅನಾವರಣಗೊಳಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಕ್ಕಳಿಗೆ ಊಟ, ಆಟ, ಪಾಠ ಬಹಳ ಮುಖ್ಯ. ಸರಿಯಾದ ಸಮಯಕ್ಕೆ ಸರಿಯಾದ ಪ್ರಮಾಣದಲ್ಲಿ ಆಹಾರ ಸೇವನೆ ಮಾಡಬೇಕು. ದೈಹಿಕ ಕಸರತ್ತು, ವ್ಯಾಯಾಮ, ಕಲಿಕೆಯಲ್ಲಿ ಏಕಾಗ್ರತೆ ಇವುಗಳನ್ನು ಅಳವಡಿಸಿ ಕೊಂಡಾಗ ಆರೋಗ್ಯವಂತ ಮತ್ತು ಸಮಾಜಕ್ಕೆ ಉಪಯೋಗವಾಗುವ ವ್ಯಕ್ತಿಯಾಗಲು ಸಾಧ್ಯವಿದೆ ಎಂದರು.

ವೈದ್ಯರು ಆಸ್ಪತ್ರೆ, ಕ್ಲಿನಿಕ್‌ಗಳಲ್ಲಿ ಕಾಯಿಲೆಗಳನ್ನು ಕಂಡುಹಿಡಿದು ರೋಗಿಗಳಿಗೆ ಔಷಧ ನೀಡಬಹುದು. ಆದರೆ ಸಮಾಜಮುಖಿ ಕಾರ್ಯಗಳನ್ನು ಮಾಡಲು ಸಮಯ ಸಾಲದು. ಸಮುದಾಯದ ಜೊತೆ ಬೆರೆತು ಕೆಲಸ ಮಾಡಿದಾಗ ಮಾತ್ರ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಸಾಧ್ಯವಾಗುತ್ತದೆ ಎಂದು ಡಾ. ಪ್ರಭಾ ಅವರು ಅಭಿಪ್ರಾಯಪಟ್ಟರು.

ನಾವು ಕೇವಲ ಎಷ್ಟು ಶಿಬಿರಗಳನ್ನು ಮಾಡಿದ್ದೇವೆ, ಎಷ್ಟು ಜನರನ್ನು ತಲುಪಿದ್ದೇವೆ ಎನ್ನುವುದಕ್ಕಿಂತ ಜನರ ಮೇಲೆ ಎಷ್ಟಮಟ್ಟಿಗೆ ಪರಿಣಾಮ ಬೀರಿದೆ ಎನ್ನುವುದು ಬಹು ಮುಖ್ಯ. ಎಷ್ಟು ಜನ ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಂಡಿದ್ದಾರೆ ಎಂಬುದನ್ನು ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿದರು.

ನಾವು ಆರೋಗ್ಯ, ಶಿಕ್ಷಣ ಯಾವುದೇ ಕಾರ್ಯಕ್ರಮಗಳಿರಲಿ, ಮೂರು ತಿಂಗಳ ಬಳಿಕೆ ಆಯಾ ಸ್ಥಳಗಳಿಗೆ ಮತ್ತೆ ಹೋಗಿ ಕಾರ್ಯಕ್ರಮ ಯಾವ ರೀತಿ ಪರಿಣಾಮ ಬೀರಿದೆ ಎಂಬುದರ ಬಗ್ಗೆ ಅವಲೋಕಿಸಬೇಕು ಎಂದು ಸಲಹೆ ನೀಡಿದರು. 2019 ರಲ್ಲಿ ಆರಂಭಗೊಂಡ ಎಸ್.ಎಸ್. ಹೆಲ್ತ್ ಕೇರ್ ಟ್ರಸ್ಟ್ ಕೊರೊನಾ ಸಂದರ್ಭದಲ್ಲಿ ನಿರಂತರವಾಗಿ ಆರೋಗ್ಯ ಸೇವಾ ಕಾರ್ಯವನ್ನು ಮಾಡುತ್ತಾ ಬರಲಾಗುತ್ತಿದೆ. 191 ಹೆಚ್‌ಐವಿ ಬಾಧಿತ ಮಕ್ಕಳನ್ನು ದತ್ತು ತೆಗೆದುಕೊಂಡು ಅವರ ಆರೈಕೆ ಮಾಡಲಾಗುತ್ತಿದೆ ಎಂದರು.

ದಾವಣಗೆರೆ ತಾಲ್ಲೂಕಿನ ಕಕ್ಕರಗೊಳ್ಳ ಮತ್ತು ಅರಸಾಪುರ ಗ್ರಾಮಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡು ಆ ವ್ಯಾಪ್ತಿಯ ಗ್ರಾಮಗಳನ್ನು ಮಾದರಿ ಆರೋಗ್ಯ ಗ್ರಾಮಗಳನ್ನಾಗಿ ಮಾಡುವ ಗುರಿ ಹೊಂದಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ವನಿತಾ ವೈದ್ಯ ವೇದಿಕೆ ಅಧ್ಯಕ್ಷರಾದ ಡಾ. ವನಜಾ ನಾರ್ವೇಕರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವನಿತಾ ಸಮಾ ಜದ ಅಧ್ಯಕ್ಷರಾದ ಶ್ರೀಮತಿ ಪದ್ಮಾ ಪ್ರಕಾಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವನಿತಾ ವೈದ್ಯ ವೇದಿಕೆ ಕಾರ್ಯದರ್ಶಿ ಡಾ. ಶಾಂತ ಭಟ್ ಮಾತನಾಡಿದರು. ಮಕ್ಕಳ ತಜ್ಞರಾದ ಡಾ.ಚೈತಾಲಿ, ಅನ್ವಿತ ಪ್ರಾರ್ಥಿಸಿದರು. ಡಾ. ನೀತು, ಡಾ. ಅಶ್ವಿನಿ ನಿರೂಪಿಸಿದರು.

**ಭದ್ರಾ ಜಲಾಶಯ**

ಇಂದಿನ ಮಟ್ಟ : 182 ಅಡಿ 3 ಇಂಚು
ಒಳ ಹರಿವು: 45080 ಕ್ಯೂಸೆಕ್ಸ್
ಹೊರ ಹರಿವು : 52730 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 162.2 ಅಡಿ

## ನೀಟ್ ಪರೀಕ್ಷೆಗೆ ಶೇ.95ರಷ್ಟು ಅಭ್ಯರ್ಥಿಗಳ ಹಾಜರಿ

ನವದೆಹಲಿ, ಜು. 17 – ವೈದ್ಯಕೀಯ ಪ್ರವೇಶಕ್ಕಾಗಿ ನಡೆಸಲಾಗುವ ನೀಟ್ ಪರೀಕ್ಷೆಗೆ ಶೇ.95ರಷ್ಟು ಅಭ್ಯರ್ಥಿಗಳು ಹಾಜರಾಗಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್.ಟಿ.ಎ.) ನಡೆಸುವ ನೀಟ್ ಪರೀಕ್ಷೆಗೆ 18.72 ಲಕ್ಷ ಅಭ್ಯರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು. ಇವರ ಪೈಕಿ ಶೇ.95ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವರ್ಷ ನಡೆದ ನೀಟ್ ಪರೀಕ್ಷೆಯಲ್ಲಿ 15.44 ಲಕ್ಷ ಅಭ್ಯರ್ಥಿಗಳು ನೋಂದಣಿಯಾಗಿದ್ದರು.

## ಬನಶಂಕರಿ ಬಡಾವಣೆ ಪಾರ್ಕ್‌ನಲ್ಲಿ ಸಸಿ ನೆಡುವ ಕಾರ್ಯಕ್ರಮ



ದಾವಣಗೆರೆ, ಜು.17- ನಗರದ ಬನಶಂಕರಿ ಬಡಾವಣೆಯ ಪಾರ್ಕ್‌ನಲ್ಲಿ ಸುಮಾರು 300ಕ್ಕೂ ಹೆಚ್ಚು ವಿವಿಧ ಬಗೆಯ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಪಾಲಿಕೆ ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ, ಮಾಜಿ ಮಹಾಪೌರ ಎಸ್.ಟಿ.ವೀರೇಶ್, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ.ಮುದಜ್ಜಿ, ಬಿಜೆಪಿ ಮುಖಂಡ ಗೋಪಿನಾಯ್ಕ ಮತ್ತಿತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿ.ಬಿ. ರಸ್ತೆ, ಬಿಲಾಲ್ ಕಾಂಪೌಂಡ್, ಟ್ರಾಫಿಕ್ ಪೋಲಿಸ್ ಠಾಣೆ, ತಾಲ್ಲೂಕ್ ಆಫೀಸ್, ಫೈರ್ ಆಫೀಸ್, ಎಪಿಎಂಸಿ, ದಿಬ್ಬಳ್ಳಿ ಕಾಂಪೌಂಡ್, ಭಗತ್‌ಸಿಂಗ್ ನಗರ, ಗಣೇಶ ಲೇಔಟ್, ಗೀತಾಂಜಲಿ ಟಾಕೀಸ್, ಈರುಳ್ಳಿ ಮಾರ್ಕೆಟ್, ಕೆಎಸ್‌ಆರ್‌ಟಿಸಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ನಿಟುವಳ್ಳಿ ಹಾಗು ನಿಟುವಳ್ಳಿ ಹೊಸ ಬಡಾವಣೆ, ದುರ್ಗಾಂಬಿಕಾ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ, ಭಗೀರಥ ಸರ್ಕಲ್, ಜಯನಗರ ಎ,ಬಿ,ಸಿ ಬ್ಲಾಕ್, ಜಯನಗರ ಚರ್ಚ್ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು. ಶಕ್ತಿನಗರ, ಬನಶಂಕರಿ ದೇವಸ್ಥಾನದ ಸುತ್ತಮುತ್ತ, ರಾಜೇಂದ್ರ ಬಡಾವಣೆ, ಡಿ.ಸಿ.ಎಂ ಟೌನ್‌ಶಿಪ್, ನಿಟುವಳ್ಳಿ-ಶ್ರೀರಾಮ್ ಬಡಾವಣೆ, ಎಸ್.ಎಸ್ ಹೈಟೆಕ್ ಲೇಔಟ್, ಕೊಟ್ರೇಶ್ವರ ಬಡಾವಣೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಶಿವ ಬ್ಯಾಂಕ್‌ನಿಂದ ಸಾಧಕ ಅವಿನಾಶ್ ವಿ. ರಾವ್‌ಗೆ ಸನ್ಮಾನ



ದಾವಣಗೆರೆ, ಜು. 17- ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಟಾಪರ್ ಆಗಿ ಹೊರ ಹೊಮ್ಮುವುದರ ಮೂಲಕ ರಾಜ್ಯಕ್ಕೆ ಮತ್ತು ದಾವಣಗೆರೆ ಜಿಲ್ಲೆಗೆ ಕೀರ್ತಿ ತಂದಿರುವ ಅವಿನಾಶ್ ವಿ. ರಾವ್ ಅವರನ್ನು ನಗರದ ಪ್ರತಿಷ್ಠಿತ ಶಿವ ಸಹಕಾರಿ ಬ್ಯಾಂಕ್ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಬ್ಯಾಂಕಿನ ಸಭಾಂಗಣದಲ್ಲಿ ಮೊನ್ನೆ ಏರ್ಪಾಡಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬ್ಯಾಂಕಿನ ಅಧ್ಯಕ್ಷರೂ ಆದ ಹಿರಿಯ ವರ್ತಕ ಎಂ.ಬಿ. ಸಂಗಮೇಶ್ವರಗೌಡ್ರು ಅವಿನಾಶ್ ಅವರನ್ನು ಶಾಲು ಹೊದಿಸಿ, ಫಲ - ಪುಷ್ಪದೊಂದಿಗೆ ಸ್ಮರಣಿಕೆ ನೀಡಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಗಮೇಶ್ವರ ಗೌಡರು, ಅವಿನಾಶ್ ಅವರ ಶೈಕ್ಷಣಿಕ ಸಾಧನೆಯನ್ನು ಮುಕ್ತ ಕಂಠದಿದ ಪ್ರಶಂಸಿಸಿದರು. ಶಿವ ಸಹಕಾರಿ ಬ್ಯಾಂಕ್ ಉನ್ನತ ವ್ಯಾಸಂಗಕ್ಕೆ ಆರ್ಥಿಕ ನೆರವು ನೀಡುವುದಾಗಿ ಘೋಷಿಸಿದರು.

ಬ್ಯಾಂಕಿನ ಉಪಾಧ್ಯಕ್ಷ ಐಗೂರು ಸಿ. ಚಂದ್ರಶೇಖರ್ ಮಾತನಾಡಿ, ಅವಿನಾಶ್ ರಾವ್ ಅವರು ಕಿರಿಯ ವಯಸ್ಸಿನಲ್ಲಿ ಉನ್ನತ ಸಾಧನೆ ಮಾಡಿರುವುದು ಶ್ಲಾಘನೀಯ ಎಂದರಲ್ಲದೇ, ಬ್ಯಾಂಕ್ ಆರ್ಥಿಕವಾಗಿ ಸಮಾಜಕ್ಕೆ ಸೇವಾ ಸೌಲಭ್ಯವನ್ನು ಕಲ್ಪಿಸುವುದರ ಜೊತೆ - ಜೊತೆಗೆ ಶೈಕ್ಷಣಿಕ - ಸಾಮಾಜಿಕವಾಗಿ ಸಮಾಜದ ಉನ್ನತಿಗೆ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷರೂ ಆದ ಬ್ಯಾಂಕಿನ ವೃತ್ತಿಪರ ನಿರ್ದೇಶಕ ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ ಮಾತನಾಡಿ, ವ್ಯಕ್ತಿತ್ವಕ್ಕೆ ಬಹು ಮುಖ್ಯ ಕಾರಣ ಅವರ ಮನಸ್ಸು. ಆಂತರಿಕ ಅರಿವು ಜಾಗೃತಗೊಂಡಾಗ ವ್ಯಕ್ತಿಯ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ಪ್ರತಿಪಾದಿಸಿದರು.

ವ್ಯಕ್ತಿಯ ಮನಸ್ಸು ಸಮಚಿತ್ತದಿಂದ ಇದ್ದಾಗ ಸಮಸ್ಯೆಗಳು ಸವಾಲಾಗಿ ಪರಿಣಮಿಸುತ್ತವೆ. ಯಾವುದೇ ವ್ಯಕ್ತಿಯ ಮನಸ್ಸು ಪ್ರಬಲವಾಗಿದ್ದಾಗ ಸಮಸ್ಯೆಗಳು ಅವಕಾಶಗಳಾಗಿ ಪರಿವರ್ತನೆಯಾಗುತ್ತವೆ ಎಂದು ಉದಾಹರಣೆಯೊಂದಿಗೆ ತಿಳಿಸಿದರು.

ಸುತ್ತಮುತ್ತಲಿನ ಪರಿಸರ, ಮನೆಯ ಸಂಸ್ಕಾರ ಉತ್ತಮವಾಗಿದ್ದಾಗ ಅಂತಹ ವ್ಯಕ್ತಿ ಸಮಾಜದಲ್ಲಿ ಉನ್ನತ ವ್ಯಕ್ತಿಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಅವಿನಾಶ್ ಕೂಡ ತನ್ನ ಕುಟುಂಬದವರು ನೀಡಿದ ಉತ್ತಮ ಸಂಸ್ಕಾರದಿಂದಾಗಿ, ತನ್ನ ಪರಿಶ್ರಮದಿಂದ ಇಂದು ಉನ್ನತ ಹುದ್ದೆಗೇರಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಿವ ಸಹಕಾರಿ ಬ್ಯಾಂಕ್ ವ್ಯವಸ್ಥಾಪನಾ ಸಮಿತಿ ಸದಸ್ಯರೂ, ಸಹಕಾರ ಸಂಘಗಳ ನಿವೃತ್ತ ಜಂಟಿ ನಿಬಂಧಕ ಬಿ. ಕುಬೇರಪ್ಪ ಮಾತನಾಡಿ, ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಧೃತಿಗೆಡದೇ, ಸತತ ಪರಿಶ್ರಮದಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕು. ನಿರ್ದಿಷ್ಟ ಗುರಿಯಿದ್ದರೆ ಸಾಧನೆ ಸುಲಭವಾಗುತ್ತದೆ ಎಂದರು.

ಪೋಷಕರು ತಮ್ಮ ಮಕ್ಕಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಣಿಗೊ (5ನೇ ಪುಟಕ್ಕೆ)

ssims SPARSH
CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ
ದಿನಾಂಕ: ಗುರುವಾರ, 21ನೇ ಜುಲೈ 2022 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 5ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte